ಮಾಡುವುದಿಲ್ಲವೆಂದು ಜನರು ಅರ್ಥ ಮಾಡಿಕೊಂಡಿದ್ದಾರೆ. ಅದಕ್ಕಾಗಿ ಮುಂಬರುವ ಲೋಕಸಭಾ ಚುನಾವಣೆಯಾದ ಮೇಲೆ ನಮ್ಮ ದೇಶದಲ್ಲಿಯೇ ಬದಲಾವಣೆ ಬರುತ್ತದೆ. ನಮ್ಮ ರಾಜ್ಯದಲ್ಲಿಯೂ ಕೂಡ ಬದಲಾವಣೆ ಬರುತ್ತದೆ. ಭಾರತೀಯ ಜನತಾ ಪಕ್ಷ ಮತ್ತೊಮ್ಮೆ ಅಧಿಕಾರಕ್ಕೆ ಬರುತ್ತದೆ. ನರೇಂದ್ರ ಮೋದಿಯವರ ಆಟ ನಡೆಯುವುದಿಲ್ಲವೆಂದು ನೀವು ಆಗಲೇ ಹೇಳಿದ್ದೀರಿ. ಆದರೆ ನರೇಂದ್ರ ಮೋದಿಯವರದ್ದೇ ಆಟ ನಡೆಯುವುದು. ಭಾರತೀಯ ಜನತಾ ಪಾರ್ಟಿಯ ಆಟ ನಡೆಯುವುದು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನಮ್ಮ ಶಕ್ತಿ ಏನು ಎಂಬುದನ್ನು ನಾವು ತೋರಿಸುತ್ತೇವೆ. ನರೇಂದ್ರ ಮೋದಿಯವರೇ ಮುಂದಿನ ಪ್ರಧಾನ ಮಂತ್ರಿಯಾಗುತ್ತಾರೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇದು ಕಟ್ಟಿಟ್ಟ ಬುತ್ತಿ. ಇದು ಸತ್ಯವಾದಂಥ ಮಾತು. ಸೂರ್ಯ ಚಂದ್ರರು ಎಷ್ಟು ಸತ್ಯವೋ ಅದೇ ರೀತಿ ನರೇಂದ್ರ ಮೋದಿಯವರು ಮುಂದಿನ ಪ್ರಧಾನ ಮಂತಿಯಾಗುವುದು ಸತ್ಯವೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಸನ್ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

10. ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ:– ಬಯಲು ಸೀಮೆ ಪ್ರದೇಶಗಳಾದ ಅರಸೀಕೆರೆ, ತುಮಕೂರು, ಕೋಲಾರ ಚಿಕ್ಕಬಳ್ಳಾಪುರ ಹಾಗೂ ಇತರ ಪ್ರದೇಶಗಳಲ್ಲಿ ಎತ್ತಿನಹೊಳೆ ಯೋಜನೆಯನ್ನು ಕೈಗೆತ್ತಿಕೊಳ್ಳುವ ಬಗ್ಗೆ

ಶ್ರೀ ಕೆ.ಎಂ.ಶಿವಲಿಂಗೇಗೌಡ(ಅರಸೀಕೆರೆ,): ಮಾನ್ಯ ಅಧ್ಯಕ್ಷರೆ, ಎತ್ತಿನಹೊಳೆ ಯೋಜನೆಯನ್ನು ಕರ್ನಾಟಕ ಸರ್ಕಾರ ಜಾರಿ ಮಾಡಬೇಕು ಎನ್ನತಕ್ಕಂಥ ಸಂದರ್ಭದಲ್ಲಿ ಸರ್ಕಾರದಿಂದ ಸ್ಪಷ್ಟಿಕರಣವನ್ನು ಬಯಸಿ ನಿಯಮ 60 ರಡಿಯಲ್ಲಿ ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ನಾವು ಬಯಸಿದ್ದೆವು. ಆದರೆ ಸಭಾಧ್ಯಕ್ಷರು ನಿಯಮ 69 ರಡಿಯಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಭಗವಂತ ಕೊಟ್ಟಿರತಕ್ಕಂಥದ್ದರಲ್ಲಿ ಮೊದಲನೆಯದು ಗಾಳಿ, ಎರಡನೆಯದು ಜಲ ಸಂಪತ್ತು. ಈ ಜಲ ಸಂಪತ್ತನ್ನು ಬಹಳ ಉತ್ತಮ ಮಟ್ಟದಲ್ಲಿ ಉಪಯೋಗಿಸಿಕೊಂಡು ಹೋಗ ತಕ್ಕಂಥದ್ದು ನಮ್ಮೆಲ್ಲ ಜನಪ್ರತಿನಿಧಿಗಳ, ಸರ್ಕಾರಗಳ ಕರ್ತವ್ಯವಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಜಲ ಸಂಪತ್ತನ್ನು ಆ ಭಗವಂತ ಕೊಡಬೇಕಾದರೆ ಬೇರೆ ಬೇರೆ ವಿಭಿನ್ನವಾದ ರೀತಿಯಲ್ಲಿ ಕೊಟ್ಟಿದ್ದಾನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಎರಡು ಕೊಳ್ಳಗಳಿವೆ. ಒಂದು ಕೃಷ್ಣಾ ಕೊಳ್ಳ ಮತ್ತೊಂದು ಕಾವೇರಿ ಕೊಳ್ಳ, ಕೃಷ್ಣಾ ಕೊಳ್ಳದಲ್ಲಿ ಕರ್ನಾಟಕ ರಾಜ್ಯದ ಬಹಳಷ್ಟು ರೈತರಿಗೆ ಅನುಕೂಲವಾಗಿದೆ. ಅದೇ ರೀತಿ ಕಾವೇರಿ ಕೊಳ್ಳದಲ್ಲಿಯೂ ಕೂಡ ಬಹಳಷ್ಟು ರೈತರಿಗೆ ಉಪಯೋಗವಾಗಿದೆ. ಕುಡಿಯುವ ನೀರಿಗೂ ಉಪಯೋಗವಾಗಿದೆ. ಬೆಂಗಳೂರಿನಂಥ ಬೃಹತ್ ನಗರಕ್ಕೆ ಇವತ್ತು ಕುಡಿಯುವ ನೀರನ್ನು ಒದಗಿಸುತ್ತಿದೆ. ಆದರೆ ಈ ಮಧ್ಯದಲ್ಲಿ ಭಗವಂತ ಬಯಲು ಸೀಮೆಯವರಾದ ನಮ್ಮನ್ನು ಏಕೆ ಕೈಬಿಟ್ಟನೋ ಗೊತ್ತಿಲ್ಲ. ಅರಸೀಕೆರೆಯಿಂದ ಪ್ರಾರಂಭವಾಗುತ್ತದೆ ಬಯಲು ಸೀಮೆ ಪ್ರದೇಶ. ಈ ರೀತಿ ಪ್ರಾರಂಭವಾಗಿ ಮುಳುಬಾಗಲು ಮತ್ತು ಕೋಲಾರದಲ್ಲಿ ಕೊನೆಗೊಳ್ಳುತ್ತದೆ. ಇದರಲ್ಲಿ ಕಡೂರಿನ ಅರ್ಧಭಾಗ ಕೂಡ ಬಯಲು ಸೀಮೆಯಲ್ಲಿ ಸೇರಿಕೊಳ್ಳುತ್ತದೆ. ಈ ರೀತಿ ಆಗಿರುವಂಥ ಸಂದರ್ಭದಲ್ಲಿ ಕಳೆದ 65 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಈ ಎರಡೂ ಕೊಳ್ಳದವರು ಸೇರಿಕೊಂಡು ನಮ್ಮ

ಬಯಲು ಸೀಮೆಯವರನ್ನು ಮರೆತುಬಿಟ್ಟಿದ್ದಾರೆ. ಯಾವುದೇ ರೀತಿಯಾಗಿರತಕ್ಕಂಥ ನೀರಾವರಿಯನ್ನು ಸಮರ್ಥವಾಗಿ ಕೊಡಿಸುವುದಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನ ಈ ರಾಜ್ಯದ ರಾಜಕಾರಣದ ಇತಿಹಾಸದಲ್ಲಿ ನಡೆದಿಲ್ಲವೆನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತು ನಾವು ಹೇಗಾಗಿದ್ದೇವೆಂದರೆ 1500 ಅಡಿ ಆಳದವರೆಗೂ ಬೋರ್ ಕೊರೆದರೂ ನೀರು ಬರುವುದಿಲ್ಲ. ಒಂದು ವೇಳೆ ಬಂದರೂ ಕಲ್ಮಷವಾದಂಥ ನೀರು ಬರುತ್ತದೆ. ತಾಯಿಯ ಎದೆಯಲ್ಲಿ ಹಾಲಿದ್ದರೆ ಮಾತ್ರ ಮಕ್ಕಳಿಗೆ ಹಾಲನ್ನು ಕುಡಿಸುವುದಕ್ಕೆ ಸಾಧ್ಯ. ಹಾಲಿಲ್ಲದಿದ್ದರೆ ರಕ್ತ ಬರುತ್ತದೆ. ಆ ರೀತಿ ಇವತ್ತು ಬಯಲು ಸೀಮೆ ಪ್ರದೇಶದಲ್ಲಿ ಬೋರ್ ಅನ್ನು ಕೊರೆದರೆ ಬರುತ್ತಿರತಕ್ಕಂಥದ್ದು ರಕ್ತದ ರೂಪದಲ್ಲಿ ಅಂಥ ನೀರನ್ನು ಕುಡಿದು ಇವತ್ತು ನಾವು ಜೀವನ ನಡೆಸಬೇಕಾದಂಥ ಪರಿಸ್ಥಿತಿಯಿದೆ. ತಾಯಿಯ ಎದೆಯಲ್ಲಿ ಹಾಲಿಲ್ಲದಿದ್ದರೆ ಏನು ಬರುತ್ತದೆ ಆ ರೀತಿ ನಾವು ಬೋರ್ ಅನ್ನು ಕೊರೆದು ಕೊರೆದು ಕೊರೆದು ಆ ಭಾಗದಲ್ಲಿರತಕ್ಕಂಥ ಎಲ್ಲ ರೈತರು ಇವತ್ತು ಸಂಕಷ್ಟದಡಿಗೆ ಹೋಗಿಬಿಟ್ಟಿದ್ದಾರೆ. ನಿಜವಾಗಿಯೂ ಎಂಥ ಒಂದು ಸಂಕಷ್ಟಕ್ಕೆ ಆ ಭಾಗದ ಜನರಾದ ನಾವು ಸಿಕ್ಕಿಹಾಕಿಕೊಂಡಿದ್ದೇವೆ ಎನ್ನತಕ್ಕಂಥದ್ದನ್ನು ಹೇಳುತ್ತಿದ್ದೇನೆ ಬೋರ್ ಕೊರೆದರೆ ಬರುವ ನೀರು ಫ್ಲೋರೈಡ್ಯುಕ್ತ ನೀರಾಗಿರುತ್ತದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಇವತ್ತು ನಮಗೆ ಪಶ್ಚಿಮ ಘಟ್ಟದಲ್ಲಿ ಆ ಭಗವಂತ ಕೊಟ್ಟಿರತಕ್ಕಂಥ ನೀರು, ಆ ಜಲಧಾರೆ ಹರಿದು ಸಮುದ್ರವನ್ನು ಸೇರುತ್ತಿದೆ.ಆದ್ದರಿಂದ ಸಮುದ್ರ ಸೇರುತ್ತಿರತಕ್ಕಂಥ ನೀರನ್ನು ಈ ನಮ್ಮ ಬಯಲು ಸೀಮೆಯಲ್ಲಿ ಬರತಕ್ಕಂಥ ಐದಾರು ಜಿಲ್ಲೆಗಳಿಗೆ ನೀರನ್ನು ಕುಡಿಯುವ ನೀರಿಗೆ ಉಪಯೋಗಿಸಿಕೊಳ್ಳಲು ಅನುಕೂಲ ಮಾಡಿಕೊಡಬೇಕು. ನಾವು ಯಾವುದೇ ರೀತಿಯಾದಂಥ ನೀರಾವರಿಗಾಗಲಿ, ಖುಷಿ ಭೂಮಿಯನ್ನು ಉದ್ಧಾರ ಮಾಡಿಕೊಳ್ಳುವುದಕ್ಕಾಗಲಿ ನೀರನ್ನು ಕೇಳುತ್ತಿಲ್ಲ. ಕೇವಲ ಕುಡಿಯುವ

ನೀರನ್ನು ಕೇಳುತ್ತಿದ್ದೇವೆ. ನಾವು ಇವತ್ತು ಪಶ್ಚಾತ್ತಾಪವನ್ನು ಪಟ್ಟು, ಕಳೆದ 40 ವರ್ಷಗಳಿಂದ ಈ ಯೋಜನೆ ಬಗ್ಗೆ ಈ ರಾಜ್ಯದ ಇತಿಹಾಸದಲ್ಲಿ ಈಗ ಪ್ರಸ್ತಾಪವಾಗಿದೆ ಪರಮಶಿವಯ್ಯ ನವರಂಥ ನೀರಾವರಿ ತಜ್ಞರು ಒಂದು ವರದಿಯನ್ನು ಕೊಟ್ಟಿದ್ದರು. ಅವರು ಒಟ್ಟು ಮೂರು ವರದಿಗಳನ್ನು ಕೊಟ್ಟಿದ್ದರು. ಇತ್ತೀಚೆಗೆ ಒಂದು ವರದಿಯನ್ನು ಕೊಟ್ಟರು ಮತ್ತು ಹಿಂದೆ ಎರಡು ವರದಿಗಳನ್ನು ಕೊಟ್ಟಿದ್ದರು. ತ್ಯಾಗರಾಜನ್ ಎನ್ನುವವರೂ ಕೂಡ ಒಂದು ವರದಿಯನ್ನು ಕೊಟ್ಟಿದ್ದಾರೆ. ಆದರೆ ಇವತ್ತಿನ ಸಂದರ್ಭದಲ್ಲಿ ಪರಮಶಿವಯ್ಯನವರ ವರದಿ ಪ್ರಕಾರ ಈ ಭಾಗಕ್ಕೆ ನೀರನ್ನು ತರುವುದಕ್ಕೆ ಸಾಧ್ಯವಿಲ್ಲವೆನ್ನತಕ್ಕಂಥ ಭಾವನೆ ಪಶ್ಚಿಮ ಘಟ್ಟದಲ್ಲಿ ಸರಾಸರಿ 6000 ಮಿಲಿ ಮೀಟರ್ ಮಳೆಯಾಗುತ್ತದೆ. ಅದೇ ಪಶ್ಚಿಮ ಘಟ್ಟವನ್ನು ಇಳಿದರೆ ನಾವಿರುವಂತಹ ಪ್ರದೇಶದಲ್ಲಿ ಅತೀ ಹೆಚ್ಚು ಎಂದರೆ ಸರಾಸರಿ 400 ಮಿ.ಮೀ. ಮಳೆಯಾಗುತ್ತದೆ. 400 ಮಿ.ಲಿ ಮೀಟರ್ ಮಳೆ ಎಲ್ಲಿ? 6000 ಮಿ.ಲಿ ಮೀಟರ್ ಮಳೆ ಎಲ್ಲಿ? ನಾವು ಅರ್ಥ ಮಾಡಿಕೊಳ್ಳಬೇಕು. 6000 ಮಿ.ಲಿ ಮೀಟರ್ ಬೀಳುವಂತಹ ಮಳೆ ಇವತ್ತು ಸಮುದ್ರಕ್ಕೆ ಧಾರಾಕಾರವಾಗಿ ಹರಿದು ಹೋಗುತ್ತದೆ. ಆ ನೀರಿನಲ್ಲಿ ಹೆಚ್ಚಿಗೆ ಅಲ್ಪ, ಸ್ವಲ್ಪ ಭಾಗ ನಮಗೆ ಕೊಡಿ. ನಾನು interstate Water dispute ಇದೆ ಎಂದು ಕೇಳಿದ್ದೆನು. ಇವತ್ತು ನಾವು ಅಕ್ಕ ಪಕ್ಕಪಕ್ಕದವರೇ ಹೊಡೆದಾಡುವಂತಹ ಪರಿಸ್ಥಿತಿ ಬರುವುದು ಬೇಡ. ಆ ರೀತಿ ಯಾರಾದರೂ ಭಾವನೆಯನ್ನು ಇಟ್ಟುಕೊಂಡಿದ್ದರೆ, ಅವರಿಗೆ ನಾನು ಮನವಿ ಮಾಡುತ್ತೇನೆ, ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ಕುಡಿಯುವ ನೀರಿಗೋಸ್ಕರ ಕೇಳುತ್ತಿದ್ದೇವೆ. ನಾವು ಪೂರ್ಣ ಪ್ರಮಾಣದ ನೀರನ್ನು ಎತ್ತಿಕೊಂಡು ಹೋಗುತ್ತಿಲ್ಲ. ಇವತ್ತು ಪರಮಶಿವಯ್ಯನವರ ಮೊದಲನೇ ವರದಿಯನ್ನು ನಾವು ಕೈಬಿಟ್ಟಿದ್ದೇವೆ. ಇವತ್ತು ಆ ಭಾಗದಲ್ಲಿ ಎರಡು ಸಾವಿರ ಟಿಎಂಸಿ ನೀರು ಧಾರಾಕಾರವಾಗಿ ಸಮುದ್ರಕ್ಕೆ ಹರಿದು ಹೋಗುತ್ತದೆ

ಎನ್ನುವಂತಹ ತಜ್ಞರ ವರದಿ ಇದೆ. ಆ ಪರಮಶಿವಯ್ಯ ವರದಿಯನ್ನು ಆಧರಿಸಿ ಇವತ್ತು ಕೇವಲ 200 ಟಿಎಂಸಿ ನೀರನ್ನು ಗಾರ್ಲೆಂಡ್ ಕೆನಾಲ್ ಮೂಲಕ ತರುವಂತಹ ಒಂದು ಯೋಜನೆ ಇತ್ತು. ಅದನ್ನೇ ಇವತ್ತು ಕೈಬಿಟ್ಟಿದ್ದಾರೆ. ಆದರೆ ಇವತ್ತು ಪರಮಶಿವಯ್ಯನವರ ಅಂತಿಮ ವರದಿ ಪ್ರಕಾರ lift irrigation ಮುಖಾಂತರ ಕೇವಲ 15 ರಿಂದ 20 ಟಿಎಂಸಿ ನೀರನ್ನು ಆ ಭಾಗದ ಜನರಿಗೆ ಕೊಡಬೇಕೆನ್ನುವ ಭಾವನೆ ಇತ್ತು ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಅಲ್ಲಿ ಏನು ಹೇರಳವಾಗಿ ಮಳೆ ಬಿದ್ದು ಸಮುದ್ರಕ್ಕೆ ಹೋಗಿ ಸೇರುತ್ತದೆ, ಅಲ್ಲಿಗೆ ನಾವಲ್ಲ ಮಳೆ ಬಂದಂತಹ ಸಂದರ್ಭದಲ್ಲಿ ಹೋಗಿ ವೀಕ್ಷಣೆ ಮಾಡಿದ್ದೇವೆ. Falls ರೀತಿಯಲ್ಲಿ ಧಮಧಮ ಎಂದು ನೀರು ಧುಮುಕುತ್ತದೆ ಮತ್ತು ಆ ನೀರು ಹರಿದು ಸಮುದ್ರವನ್ನು ಸೇರುತ್ತದೆ. ಆ ನೀರನ್ನು ಕೊಡಬೇಕೆನ್ನುವ ನಿಟ್ಟಿನಲ್ಲಿ ಇವತ್ತು ಸರ್ಕಾರ ಒಂದು ಯೋಜನೆಯನ್ನು ಜಾರಿಗೆ ತೆಗೆದುಕೊಂಡಿದ್ದು, ಇವತ್ತು ಎಂಟು ಕಡೆ ಚಿಕ್ಕ ಚಿಕ್ಕದಾಗಿ aqueduct or barrage ಕಟ್ಟಿ, ಆ ನೀರನ್ನು ಆಹಾರದಲ್ಲಿ ನಿಲ್ಲಿಸಿ, ಅಲ್ಲಿಂದ ಇವತ್ತಿನ ಆಧುನಿಕತೆಯ ಆಧಾರದ ಮೇಲೆ pipeline ಮುಖಾಂತರ ಸಕಲೇಶಪುರದ ಅರುವನಹಳ್ಳಿಗೆ ತಂದು, ಅಲ್ಲಿಂದ gravity level ನಲ್ಲಿ ನೀರು ತರುವುದಕ್ಕೆ ಮಾಡಿರುವಂತಹದ್ದು. ಈ ಯೋಜನೆಗೆ ಇವತ್ತು ಅನೇಕ ವಿಘ್ನಗಳನ್ನು ರಾಜಕೀಯ ದೊಂಬರಾಟಗಳನ್ನು ಶುರು ಮಾಡಿದ್ದಾರೆ. ಇದು ಆಗಬಾರದು. ನಾವು ಬಹಳ ದಿವಸಗಳಿಂದ ಕಾಯುತ್ತಾ ಕುಳಿತುಕೊಂಡಿದ್ದೇವೆ. ನಮಗೆ ಆ ಭಾಗದಲ್ಲೂ ನೀರಿಲ್ಲ, ಈ ಭಾಗದಲ್ಲೂ ಕೂಡ ಇಲ್ಲ. ಪಶ್ಚಿಮ ಘಟ್ಟದ ತಿರುವಿನಿಂದ ಬರತಕ್ಕಂಥ ನೀರಿನಿಂದ ಈ ಬಯಲು ಸೀಮೆ ಪ್ರದೇಶದ ಜನ ಬದುಕಬೇಕೆನ್ನುವ ಆಶಾಭಾವನೆಯನ್ನು ಇಟ್ಟುಕೊಂಡಿದ್ದೆವು. ಇಂತಹ ಸಂದರ್ಭದಲ್ಲಿ ಇವತ್ತು ಯಾವುದೇ ರೀತಿಯಲ್ಲೂ ರಾಜಕೀಯವನ್ನು ಬಳಸದೆ ಒಂದು ಉತ್ತಮವಾದಂತಹ ಯೋಜನೆಯನ್ನು ಮಾಡಿ, ನಮಗೆಲ್ಲ ಕುಡಿಯುವ ನೀರನ್ನು ಕೊಡಬೇಕೆನ್ನುವ ವಿಚಾರ ಏನಿದೆ,

ಇದನ್ನು ಜಾರಿಗೆ ತರುವುದಕ್ಕೆ ಸರ್ಕಾರ ಪ್ರಾಮಾಣಿಕವಾದಂತಹ ಬದ್ಧತೆಯನ್ನು ಇಟ್ಟುಕೊಳ್ಳಬೇಕು. ಆ ಬದ್ಧತೆಯನ್ನು ಇಟ್ಟುಕೊಂಡು, ಇವತ್ತು ಆ ಯೋಜನೆ ಗಳನ್ನು ಜಾರಿ ಮಾಡತಕ್ಕಂಥ ಸಂದರ್ಭದಲ್ಲಿ ಮೊದಲ ಹಂತದಲ್ಲಿ ಎಂಟು ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಿ, ಮೊದಲ ಪ್ಯಾಕೇಜನಲ್ಲಿ ಟೆಂಡರ್ ಅನ್ನು DPR - 1 ಎಂದು ಹಿಂದಿನ ಬಿಜೆಪಿ ಸರ್ಕಾರ ಕರೆದಂತಹ ಟೆಂಡರ್ ಅನ್ನು ನೀವು ಇವತ್ತು Cancel ಮಾಡಿದ್ದೀರಿ. ಅದನ್ನು cancel ಮಾಡುವುದಕ್ಕೆ ಕಾರಣವೇನು? ತಾಂತ್ರಿಕ ತಜ್ಞರಿಂದ ವರದಿಯನ್ನು ತಾವು ಪಡೆದಿರಲಿಲ್ಲವೇ? ಇವತ್ತು ಅಲ್ಲಿ ನೀರಿನ ಲಭ್ಯತೆ ಬಗ್ಗೆ ಸಂಶಯವನ್ನು ವ್ಯಕ್ತಪಡಿಸುತ್ತಾರೆ. ಅಲ್ಲಿಂದ ಬರುವಂತಹ ನೀರಿನ ಬಗ್ಗೆ ಸಂಶಯವನ್ನು ವ್ಯಕ್ತಪಡಿಸುವಂತಹ ಕಾಲದಲ್ಲಿ, ಮಾನ್ಯ ರಾಮಪ್ರಸಾದ್, Tata Institute Professor ರವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯಲ್ಲಿ ನಿಜವಾಗಿ 24 ರಿಂದ30 ಟಿಎಂಸಿ ನೀರು ಲಭ್ಯವಾಗುತ್ತದೆನ್ನುವ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ hydrologic Survey ಕೂಡ ಆಗಿದೆ. ಅದರಿಂದ ಕೂಡ ಸ್ಪಷ್ಟೀಕರಣ ಸಿಕ್ಕಿದೆ. ಆದರೆ ಮಾನ್ಯ ವೀರಪ್ಪ ಮೊಯಿಲಿಯವರು ಒಂದು ಮೀಟಿಂಗ್ ಮಾಡಿದಂತಹ ಸಂದರ್ಭದಲ್ಲಿ Central Water Commission ನವರು ಒಂದು ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಆ ಪ್ರಕಾರ ಅಲ್ಲಿ ನೀರಿನ ಲಭ್ಯತೆ ಕಷ್ಟ ಇದೆ, ಅಲ್ಲಿ ಆ ಯೋಜನೆ ಮಾಡುವುದರಿಂದ ಆರ್ಥಿಕ ನಷ್ಟ ವುಂಟಾಗುತ್ತದೆ, ಅದರಿಂದ ಯಾವುದೇ ರೀತಿಯ ಅನುಕೂಲ ವಾಗುವುದಿಲ್ಲ ವೆನ್ನುವಂತಹ ಭಾವನೆಯನ್ನು ಆ ಸಭೆ ವ್ಯಕ್ತ ಮಾಡಿದೆ. ಆದರೆ ಆ ಸಭೆಯಲ್ಲಿ ಆ ರೀತಿ ಭಾವನೆ ವ್ಯಕ್ತವಾದ ಮೇಲೆ ರಾಮಪ್ರಸಾದ್‌ರ ಅವರಿಂದ hydrological Survey ಮಾಡಿಸಿ, ಅಲ್ಲಿ ನಿಜವಾಗಿ ನೀರಿನ ಲಭ್ಯತೆ ಇದೆ ಎನ್ನುವ ವರದಿಯನ್ನು ಸರ್ಕಾರ ಪಡೆದುಕೊಂಡಿದೆ ಎನ್ನುವಂತಹ ವಿಚಾರವನ್ನು ಈ ಸಂದರ್ಭದಲ್ಲಿ ನಾವು ಹೇಳಬೇಕಾಗುತ್ತದೆ. ಈಗ ಮಾನ್ಯ

ಪರಮಶಿವಯ್ಯನವರು ಗಾರ್ಲೆಂಡ್ ಕೆನಾಲ್ ಸರ್ವೆಯನ್ನು ಕೈಬಿಟ್ಟು, ಟನೆಲ್ ಮುಖಾಂತರ ಮಾಡಿ ಎನ್ನುವಂತಹ ವರದಿಯನ್ನು ಕೊಟ್ಟಿದ್ದಾರೆನ್ನುವ ವಿಚಾರ ನನಗೆ ಮಾಹಿತಿಯಿಂದ ತಿಳಿದು ಬಂದಿದೆ. ನಾನು ಒಂದು ಮಾತನ್ನು ಸ್ಪಷ್ಟ ಮಾಡುತ್ತೇನೆ. ನೀವು ಎತ್ತಿನ ಹೊಳೆ ಮತ್ತು ನೇತ್ರಾವತಿ ತಿರುವು ಯೋಜನೆ ಮೂಲಕ ಮಾಡಬೇಕೆನ್ನುವ ವಿಚಾರ ಬಂತು, ಅದನ್ನು ಬಿಟ್ಟಿರಿ. ಈಗ ನೇತ್ರಾವತಿ ತಿರುವು ಹೋಗಿ ಎತ್ತಿನ ಹೊಳೆಯಾಗಿದೆ. ಆ ಎತ್ತಿನ ಹೊಳೆಯನ್ನು ನೀವು ಕೈಬಿಟ್ಟಿದ್ದೆಯಾದರೆ, ಇದಕ್ಕೆ ರಾಜಕೀಯವನ್ನು ಬೆರೆಸಿ. ಇದರಲ್ಲಿ ಏನಾದರೂ ಅನ್ಯಾಯವಾಗಿದ್ದಾದರೆ, ಈ ಬಯಲು ಸೀಮೆಯಲ್ಲಿ ಬರುವಂತಹ ನಲವತ್ತೈದು ತಾಲ್ಲೂಕುಗಳವರು ಕುಡಿಯುವ ನೀರಿಗೆ ಏನು ಪಶ್ಚಾತ್ತಾಪವನ್ನು ಪಡುತ್ತಿದ್ದೇವೆ, ಇದರ ಶಾಪ, ಇದರ ಪಾಪವನ್ನು ಹೊರಬೇಕಾಗುತ್ತದೆ. ಈ ವಿಚಾರದಲ್ಲಿ ನಾನು ಪ್ರಾಮಾಣಿಕವಾಗಿ ಹೇಳುವದೇನೆಂದರೆ, ನೀವು ಇದರಲ್ಲಿ ರಾಜಕೀಯವನ್ನು ಬೆರೆಸಬೇಡಿ, ದಯಮಾಡಿ ಇದರ ಪ್ರಾಮಾಣಿಕತೆ ಮತ್ತು ಸತ್ಯಾಸತ್ಯತೆಯನ್ನು ಅರಿತು ಈ 43 ತಾಲ್ಲೂಕುಗಳ ಭವಿಷ್ಯವನ್ನು ಕಂಡು ಹಿಡಿಯುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೀರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಮಗೆ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಒಂದು ವಿಚಾರದಲ್ಲಿ ಮಾತ್ರ ಸಮಸ್ಯೆಯಾಗುತ್ತಿಲ್ಲ, ಇವತ್ತು ಅಂತರ್ಜಲ ಕೂಡ ನಮ್ಮಲ್ಲಿ ಬತ್ತಿಹೋಗಿದೆ. ಒಂದೂವರೆ ಎರಡು ಸಾವಿರ ಅಡಿ ಬೋರ್ ಕೊರೆದರೂ ಕೂಡ ನೀರು ಬರುತ್ತಿಲ್ಲ. ನಮಗೆ ಕುಡಿಯುವುದಕ್ಕೆ ನೀರನ್ನು ಕೊಡುವುದರ ಜೊತೆಗೆ ಅಂತರ್ಜಲ ಕೂಡ ವೃದ್ಧಿಯಾಗಬೇಕಾಗಿದೆ. ಅರಸೀಕೆರೆಯಿಂದ ಹಿಡಿದು ಮಾಲೂರಿನವರೆಗೆ ಈ ಅಂತರ್ಜಲದ ವೃದ್ಧಿ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ಈ ಸರ್ಕಾರದಿಂದ ಏನಾದರೂ ಆಗದಿದ್ದರೆ ಬಹುಶಃ ನನ್ನ ಕ್ಷೇತ್ರದಲ್ಲಿ ಐದು ಲಕ್ಷ ತೆಂಗಿನ ಮರ ಒಣಗಿ ಹೋಗಿವೆ. ಮುಂದಿನ ದಿವಸದಲ್ಲಿ ಇವರಿಗೆ

ಬೆಂಗಳೂರು ಹತ್ತಿರದಲ್ಲಿ ಇದೆ, ಏನಾದರೂ ಮಾಡಿ ಜೀವನ ಮಾಡಬಹುದು. ಆದರೆ ನಾವು ಇನ್ನೂರು ಕಿಲೋಮೀಟರ್ ದೂರದಲ್ಲಿದ್ದೇವೆ. ನಾವು ನಿಜವಾಗಿಯೂ ಕೂಡ ವಲಸೆ ಬರುವುದಕ್ಕೆ ಸಾಧ್ಯವಿಲ್ಲ. ಅಂತಹ ಒಂದು ಹೀನಾಯ ಪರಿಸ್ಥಿತಿಯನ್ನು ನಾವು ಅನುಭವಿಸುತ್ತಿದ್ದೇವೆ. ನಮ್ಮ ಜೀವನ ಬಹಳ ಕಷ್ಟಕರವಾಗಿದೆ. ನಾವು ಬೆಂಗಳೂರನ್ನು ಇಲ್ಲಿಂದ ಬಿಟ್ಟು ಅಲ್ಲಿಗೆ ಹೋಗಬೇಕಾದರೆ ನಿಜವಾಗಿ ಎಷ್ಟು ಕಷ್ಟವಾಗುತ್ತದೆ? ಎಂದರೆ ನಮ್ಮಲ್ಲಿ 200 ಹಳ್ಳಿಗಳಲ್ಲಿ ಕುಡಿಯುವುದಕ್ಕೇ ನೀರಿಲ್ಲ. ನಮ್ಮ ಉಸ್ತುವಾರಿ ಸಚಿವರು ಬಂದು ಎಲ್ಲರೆದುರಿಗೂ ಆಕ್ಷನ್ ಪ್ಲಾನ್ ಮಾಡಿಕೊಳ್ಳಿ 50ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳಿದರು. ಆದರೆ ಇವತ್ತಿನವರೆಗೂ ಒಂದು ರೂಪಾಯಿ ಕೂಡ ಬಿಡುಗಡೆಯಾಗಿಲ್ಲ. ನಮ್ಮಲ್ಲಿ ಬೋರ್ ಕೊರೆದರೂ ನೀರು ಬರುವುದಿಲ್ಲ. ಕುಡಿಯುವ ನೀರಿಗೆ ಏನು ಮಾಡಬೇಕು ಎನ್ನುವ ಸಮಸ್ಯೆ ಇದೆ. ಅದಕ್ಕೆ ಏನು ಮಾಡಬೇಕೆನ್ನುವುದಕ್ಕೆ ತಾವೇ ಇವತ್ತಿನ ದಿವಸ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದಕ್ಕೆ ಪರಿಹಾರ ನೀಡಬೇಕು. ನಾನು ಈ ಒಂದು ಯೋಜನೆ ಎಂದು ಹೇಳುತ್ತಿಲ್ಲ. 192 ಟಿಎಂಸಿ ನೀರನ್ನು ಕಾವೇರಿ ಜಲದಿಂದ ಮದ್ರಾಸನವರಿಗೆ ಕೊಟ್ಟರೆ, ಅವರ ತೀರ್ಪು ಮುಗಿಯಿತು. ನೀರು ಹೆಚ್ಚಾಗಿ ಸಮುದ್ರವನ್ನು ಸೇರುವಂತಹ ಸಂದರ್ಭದಲ್ಲಿ ಆ ನೀರನ್ನು ಹಿಡಿದು ಕೆರೆ ಕೆರೆಗೆ ತುಂಬಿಸುವಂತಹ ಪ್ರಾಮಾಣಿಕವಾದಂತಹ ಪ್ರಯತ್ನ ಇವತ್ತು ಈ ರಾಜ್ಯದಲ್ಲಿ ನಡೆಯಬೇಕಾಗಿದೆ. ಇದನ್ನು ನಾವು ಮಾಡುತ್ತಿಲ್ಲ ನಾವು ಇದನ್ನು ಮಾಡುತ್ತಿಲ್ಲ. ಅದನ್ನು ಬಿಟ್ಟು ಇನ್ಯಾವುದೋ ರೂಪದಲ್ಲಿ ಹೋಗುತ್ತಿದ್ದೇವೆ. ಇದರಿಂದ ಮುಂದಿನ ದಿವಸಗಳಲ್ಲಿ ಬಹಳ ಪಶ್ಚಾತ್ತಾಪವನ್ನು ಅನುಭವಿಸಬೇಕಾದಂಥ ಪರಿಸ್ಥಿತಿ ಅನಿವಾರ್ಯವಾಗಬಹುದು. ಅದಕ್ಕೋಸ್ಕರ ಯಾವುದೇ ನೀರನ್ನು ಕೆರೆ ಕೆರೆಗೆ ತುಂಬಿಸಿ, ಆ ಕೆರೆಯಲ್ಲಿ ಅಂತರ್ಜಲದ ಮಟ್ಟವನ್ನು ಹೆಚ್ಚಿಸಿ, ಆ ನೀರನ್ನು ಪುನಃ filter ಮಾಡಿ, ಗ್ರಾಮೀಣ ಪ್ರದೇಶದ ಜನರಿಗೆ ಕೊಡುವಂಥ

ಕಾರ್ಯಕ್ರಮವನ್ನು ಇಡೀ ರಾಜ್ಯದಲ್ಲಿ ಯಾವುದೇ ಭಾಗದಲ್ಲಿರಲಿ, ಈ ಕಾರ್ಯಕ್ರಮವನ್ನು ಜಾರಿಗೆ ತರುವಂಥ ಒಂದು ಪ್ರಾಮಾಣಿಕವಾದ ಪ್ರಯತ್ನ ಸರ್ಕಾರದಲ್ಲಿ ನಡೆಯಬೇಕಾಗಿದೆ. ಇದಕ್ಕೆ ನಾವೆಲ್ಲಾ ಒಟ್ಟಾಗಿ ಸೇರಿ ಈ ಕಾರ್ಯಕ್ರಮವನ್ನು ಜಾರಿಗೆ ತರದೇ ಹೋದರೆ, ಮುಂದಿನ ದಿವಸಗಳಲ್ಲಿ ಅಂತರ್ಜಲದ ಮಟ್ಟವನ್ನು ಕಳೆದುಕೊಳ್ಳುತ್ತೇವೆ. ಅದರ ಜೊತೆಗೆ ಕುಡಿಯುವ ನೀರನ್ನು ಹಾಳು ಮಾಡಿಕೊಳ್ಳುತ್ತೇವೆ. ಅದಕ್ಕೋಸ್ಕರ ದಯಮಾಡಿ ಇವತ್ತು ಹೆಚ್ಚಿನ ಪ್ರಮಾಣದಲ್ಲಿ ಕೆರೆಗಳಿಗೆ ನೀರನ್ನು ತುಂಬಿಸುವಂಥ ಒಂದು ಪ್ರಾಮಾಣಿಕವಾದ ಪ್ರಯತ್ನ ನಡೆಯಬೇಕು. ಇವತ್ತು 400 ಅಡಿಯಿಂದ ನೀರು lift ಆಗುತ್ತದೆಯೇ ಎಂದು ಹೇಳುತ್ತಾರೆ, ನೀರು ಬರುತ್ತದೆಯೇ ಎಂದು ಕೆಲವರು ಟೀಕೆ ಮಾಡುತ್ತಾರೆ. ಆಯಿತು, ಇವತ್ತು ಕೃಷ್ಣಾ ಕೊಳ್ಳದಲ್ಲಿ ಚಿಮ್ಮಲಗಿಯಿಂದ 50,000 ಎಕರೆಗೆ ನೀರು ಕೊಡುತ್ತಿಲ್ಲವೇ? ಅದೇ ರೀತಿ ಕರ್ನಾಟಕ ರಾಜ್ಯದಲ್ಲಿ ಮುಳವಾಡ, ಚಿಮ್ಮಲಗಿ ಇಂಥ ಅನೇಕ ಏತ ನೀರಾವರಿ ಯೋಜನೆಗಳು ಯಶಸ್ವಿಯಾಗಿವೆ. ಆದ್ದರಿಂದ, ಈ ಏತ ನೀರಾವರಿ ಯೋಜನೆಯೂ ಕೂಡ ಯಶಸ್ವಿಯಾಗುತ್ತದೆ. ಪಾರ್ಲಿಮೆಂಟ್ ಚುನಾವಣೆ ಹತ್ತಿರಕ್ಕೆ ಬಂದಿದೆ, ಅದಕ್ಕೋಸ್ಕರ ಇದನ್ನು ನೀವು ಏನಾದರೂ 31ನೇ ತಾರೀಖಿಗೆ ಶಂಕುಸ್ಥಾಪನೆ ಮಾಡಿ ಇಲ್ಲಿ ಒಂದು ಕಲ್ಲು ಹಾಕಿ ಮನೆಗೆ ಹೋಗೋಣವೆಂಬ ಭಾವನೆಯಿಂದ ಏನಾದರೂ ಹಾಕುವುದಾದರೆ, ದಯಮಾಡಿ ಈ ಬಯಲು ಸೀಮೆಯ ಜನರಿಗೆ ಮೋಸ ಮಾಡಬೇಡಿ. ನಾವು ನಿಜವಾಗಿಯೂ ನೀರು ಬರುತ್ತದೆಂದು ಜಾತಕ ಪಕ್ಷಿಯಂತೆ ಕಾಯುತ್ತಾ ಕುಳಿತ್ತಿದ್ದೇವೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಕಳೆದ 50 ವರ್ಷ ಗಳಿಂದಲೂ ಚಿಂತನೆ ಮಾಡದೇ ಇರುವಂಥದ್ದನ್ನು ತಂದಿದ್ದೇವೆ. ಅದು ಕಾರ್ಯರೂಪಕ್ಕೆ ಬರುತ್ತದೆ, ತಾವು ಅದಕ್ಕೆ at least ಅಭಿನಂದನೆಯನ್ನಾದರೂ ಸಲ್ಲಿಸುತ್ತೀರೆಂದು ಅಂದುಕೊಂಡಿದ್ದೆ.

ಶ್ರೀ ಕೆ.ಎಮ್.ಶಿವಲಿಂಗೇಗೌಡ: ನಾವು ಅಭಿನಂದನೆಯನ್ನು ಬಿ.ಜೆ.ಪಿ. ಯವರಿಗೆ ಸಲ್ಲಿಸಬೇಕು, ನಿಮಗಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಏಕೆ?

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮೊದಲು ಅವರು ಮಾಡಿದ್ದು,

ಶ್ರೀ ಡಿ.ಕೆ.ಶಿವಕುಮಾರ್: ಅವರು ಏನು ಮಾಡಿದರು?

ಶ್ರೀ ಕೆ.ಎಂ.ಶಿವಲಿಂಗೇಗೌಡ: ನಾನು ಯಾರಾರು ಏನೇನು ಮಾಡಿದ್ದಾ ರೆಂಬುದನ್ನೆಲ್ಲಾ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಆಯಿತು, ಮಾನ್ಯ ಶಿವಲಿಂಗೇಗೌಡರೆ ಹೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ತಾವೂ ಕೈ ಜೋಡಿಸಿದ್ದೀರಿ, ನಿಮಗೆ ಯಾವಾಗ Thanks ಹೇಳಬೇಕೆಂದರೆ, resurvey ಮಾಡಿ, ಆಡಳಿತಾತ್ಮಕ ಅನುಮೋದನೆ 12,000 ಕೋಟಿ ರೂ.ಗಳಿಗೆ ಕೊಟ್ಟಿದ್ದೀರಿ. ಅದನ್ನು ಕಾರ್ಯರೂಪಕ್ಕೆ ತಂದು, ಶರವೇಗದಲ್ಲಿ ಎತ್ತಿನಹೊಳೆಗೆ ಒಂದು ವಿಶೇಷವಾದ

ಪ್ರಾಧಿಕಾರವನ್ನು ಮಾಡಿ, ಅದಕ್ಕೆ ಕ್ರಾಂತಿಕಾರಕವಾದಂಥ ರೂಪದಲ್ಲಿ ಹಣವನ್ನು ತೊಡಗಿಸಿ, ಆ ಕಾರ್ಯಕ್ರಮ ತ್ವರಿತವಾಗಿ ನಡೆಸಿ, ಒಂದೆರಡು ವರ್ಷಗಳಲ್ಲಿ ನೀರನ್ನು ಕೊಡುವಂಥ ಭರವಸೆಯನ್ನು ನೀವು ಕೊಟ್ಟರೆ, ನಿಮಗೆ ಸನ್ಮಾನವಲ್ಲ, ಉಂಗುರವನ್ನು ತೊಡಿಸಿ, ನಿಮಗೆ ಕೈಮುಗಿಯುತ್ತೇವೆ.

ಅಧ್ಯಕ್ಷರು : ಆಯಿತು, very good, Ok, ಸಾಕು ಬಿಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಅದು ಬಿಟ್ಟು ಇನ್ನೂ ನೀವು ಏನು ಮಾಡಿಲ್ಲ. ಈಗಲೇ ಅಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರು ಹಾಕಬೇಕೆಂದರೆ, ಮಾನ್ಯ ಮುನಿಯಪ್ಪನವರು ಕಿತ್ತುಕೊಂಡು ಹೋಗಿ ಎನ್ನುತ್ತಾರೆ, ನೀರು ಬರುವುದಿಲ್ಲವೆಂದು statement ಕೊಡುತ್ತಾರೆ. ಈ ರೀತಿ ರಾಜಕೀಯದ ವ್ಯತ್ಯಾಸದ ಮಾತುಗಳು ಬೇಡ.

ಅಧ್ಯಕ್ಷರು : ಅದು ಇಲ್ಲಿ ಬೇಡ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಕೈ ಮುಗಿಯುತ್ತೇನೆ, ಒಂದು ನಿಮಿಷ.

ಅಧ್ಯಕ್ಷರು: ಇಲ್ಲಿ ಬೇರೆಯವರ ವಿಷಯ ಬೇಡ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ನಾನು ಬೇರೆಯವರ ವಿಷಯಗಳನ್ನು ಹೇಳುವುದಿಲ್ಲ, ನಾನು ಹಾಗೆ ಹೋಗುವುದಿಲ್ಲ. ಇಂಥ ಸಂದರ್ಭದಲ್ಲಿ ಮಾನ್ಯ ಸಚಿವರು ಇಲ್ಲೇ ಕುಳಿತಿದ್ದಾರೆ, ಯುವಕರಾಗಿದ್ದಾರೆ, ಅವರಿಗೆ ಕೈ ಮುಗಿದು ಕೇಳುವಂಥದ್ದು. ಇವರಿಗೆ ನೀರಾವರಿ ವಿಷಯವಾಗಿ ಹೋರಾಟ ಮಾಡುವಂಥ ಭಾವನೆ ಇದೆ. ಅವರ ಮನೆಯ ಹತ್ತಿರ ರಾತ್ರಿ 9–10 ಗಂಟೆಯವರೆಗೆ

ಕಾದಿದ್ದೇವೆ. ಅದು ಏತಕ್ಕೋಸ್ಕರವೆಂದರೆ ಅರಸೀಕೆರೆ ಬಯಲುಸೀಮೆಯನ್ನು ಕೈ ಬಿಟ್ಟು ಬಿಟ್ಟರೆ, ನಮಗೆ ಇನ್ನೂ ಎಲ್ಲೂ ನೀರು ಇಲ್ಲ. ಅಲ್ಲಿ ಅಪ್ಪರ್ ಭದ್ರಾದಿಂದ ಅರಸೀಕೆರೆಗೆ 3 ಟಿ.ಎಂ.ಸಿ. ನೀರನ್ನು ಕೊಡಬೇಕೆಂದು ಮಾನ್ಯ ಕೆ.ಸಿ. ರೆಡ್ಡಿಯವರು ಹೇಳಿದ್ದರು. ಆ ನೀರೂ ಇಲ್ಲ, ಈ ಕಡೆ ತಮಿಳುನಾಡಿನ ವರಿಂದ ಕಾವೇರಿ ಬೇಸಿನ್ ಗಲಾಟೆ ಇದ್ದು, ಇದರಿಂದ ನಮಗೆ ನೀರು ಬರುವ ಆಗಿಲ್ಲ ಇದರ ಮಧ್ಯೆ ನಾವು ಬಯಲುಸೀಮೆಯವರು ಏಕೆ ಇರಬೇಕು? ನಾವು ವಿಧಾನಸಭೆಗೆ ಏಕೆ ಬರಬೇಕು? ಅಲ್ಲಿ ಜನರಿಗೆ ನೀರು ಕೊಡುವ ಶಕ್ತಿ ಇಲ್ಲವೆಂದ ಮೇಲೆ ನಾವು ಏಕೆ ಇಲ್ಲಿಗೆ ಬರಬೇಕು? ನಾವು ಬರಬಾರದು. ಇದು ನಾವು ಇವತ್ತು ಅವತ್ತಿನಿಂದ ನಡೆದುಕೊಂಡು ಬಂದಿರುವಂಥ ವ್ಯತ್ಯಾಸವನ್ನು ಕಂಡುಹಿಡಿದು ಎತ್ತಿನ ಹೊಳೆ ಯೋಜನೆ ಆಗಲೇ ಬೇಕು, ತಾವು ಅದನ್ನು ಯಾವ ಹೊಳೆ ಎಂದು ಬೇಕಾದರೂ ಕರೆದುಕೊಳ್ಳಿ, ನನಗೆ ಗೊತ್ತಿಲ್ಲ. ನಮ್ಮ ಮಂಗಳೂರು ಜಿಲ್ಲೆಯ ಸ್ನೇಹಿತರಿಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ನಾವು ಕುಡಿಯುವುದಕ್ಕಾಗಿ ನೀರನ್ನು ತೆಗೆದುಕೊಂಡು ಹೋಗುತ್ತೇವೆ ಹೊರತು ಬೇರೆ ಯಾವುದಕ್ಕೂ ತೆಗೆದುಕೊಳ್ಳುವುದಿಲ್ಲ, ಇದಕ್ಕೆ ತಾವ್ಯಾರೂ ಅಡ್ಡ ಬರಬೇಡಿ ಎಂದು ಕೈ ಮುಗಿದು ಕೇಳಿಕೊಳ್ಳುತ್ತೇನೆ. ದಯವಿಟ್ಟು ಈ ಒಂದು ಯೋಜನೆಗೆ ಅವಕಾಶ ಮಾಡಿಕೊಡಿ, ಈ ಯೋಜನೆ ನಿಜವಾಗಿಯೂ ಆಗಲಿ, ಬಯಲು ಸೀಮೆಯ ಜನರ ಸಂಕಷ್ಟ ನಿವಾರಣೆಯಾಗಲೆಂದು ನಾನು ಕೈ ಜೋಡಿಸಿ, ಕೈ ಮುಗಿಯುತ್ತೇನೆ. ನಾವು ಏನು 200 ಟಿ.ಎಂ.ಸಿ. ನೀರನ್ನು ತೆಗೆದುಕೊಂಡು ಹೋಗುವುದಿಲ್ಲ. ಕೇವಲ 10–20 ಟಿ.ಎಂ.ಸಿ ನೀರನ್ನು ಕುಡಿಯುವುದಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದೇವೆ. ದಯಮಾಡಿ ಈ ಯೋಜನೆಗೆ ಕಾರ್ಯಕ್ರಮ ರೂಪಿಸಿ, ಅದರ ಜೊತೆಗೆ ನಾವು ಇಷ್ಟೆಲ್ಲಾ ಹೋರಾಟ ಮಾಡಿದ್ದೇವೆ. ನಮ್ಮ ಅರಸೀಕೆರೆಗೆ ಕೆರೆ–ಕೆರೆಗೆ ನೀರು ತುಂಬಿಸುವ

ಕಾರ್ಯಕ್ರಮಕ್ಕೆ ಮಾನ್ಯ ಸಚಿವರು, ಎಲ್ಲರಿಗೂ ಕೊಡಲಿ, ನಾವು ಕೇಳುವುದಿಲ್ಲ. ಆದರೆ ನಮ್ಮ ಸ್ವಾರ್ಥ ಇದೆ.

ಅಧ್ಯಕ್ಷರು : ಆಯಿತು, ತಾವು ಚೆನ್ನಾಗಿ ಹೇಳಿದ್ದೀರಿ ಬಿಡಿ, ಸಾಕು.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ನಮ್ಮ ಅರಸೀಕೆರೆ ಯವರಾದ ನಾವು ಹಾಸನ ಜಿಲ್ಲೆಯಲ್ಲಿ ಹುಟ್ಟಿದರೂ ಕೂಡ ನಾವು ವಿಭಿನ್ನ ವಾಗಿದ್ದೇವೆ, ದಯವಿಟ್ಟು ನಮಗೆ ಅವಕಾಶ ಮಾಡಿಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಅನೇಕ ಜನ ಸ್ನೇಹಿತರು ಮಾತನಾಡುವವರಿದ್ದಾರೆ, ಇದರಲ್ಲಿ ರಾಜಕೀಯವನ್ನು ಬೆರೆಸಬೇಡಿ, ಈ ಯೋಜನೆಯನ್ನು ಈ ತಿಂಗಳು 15ನೇ ತಾರೀಖಿಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ, ತೆಗೆದುಕೊಳ್ಳಿ, ನಾವು ಬೇಡವೆಂದು ಹೇಳುವುದಿಲ್ಲ ಆದರೆ ಏನಾದರೂ ರಾಜಕೀಯ ದೊಂಬರಾಟವನ್ನು ಆಡಿದರೆ, ಹೋರಾಟ ಅಲ್ಲ, ಪ್ರಾಣತ್ಯಾಗ ಮಾಡುವುದಕ್ಕೂ ತಯಾರಿದ್ದೇನೆ. ನಾನು ಈ ಮಾತನ್ನು ಆತ್ಮ ಸಾಕ್ಷಿಯಾಗಿ ಹೇಳುತ್ತಿದ್ದೇನೆ. ನಾವು ಬದುಕಬೇಕು, ಉಳಿಯಬೇಕೆಂದರೆ ಈ ನೀರಾವರಿಯನ್ನು ತೆಗೆದು ಕೊಂಡು, ನಾವು ಕುಡಿಯುವ ನೀರನ್ನು ತೆಗೆದುಕೊಳ್ಳಬೇಕು, ಇಲ್ಲವೆಂದರೆ ಪ್ರಾಣ ಹಾನಿಯಾಗುತ್ತದೆ, ಅದಕ್ಕೋಸ್ಕರ ನಾವು ಯಾವುದೇ ತ್ಯಾಗಕ್ಕೂ ಸಿದ್ಧರಿದ್ದೇವೆ. ಅದಕ್ಕೆ ರಾಜಕೀಯವಾದ ಆಟವನ್ನು ಮಾಡದೇ, ಈ ನೀರಾವರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಟ್ಟು, ಅತಿ ಬೇಗ, ಅತಿ ತುರ್ತಾಗಿ ನಿಮ್ಮ ಕಾಲದಲ್ಲಿ ಆಗಬೇಕು. ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇಲ್ಲ, ಇದ್ದಿದ್ದರೆ ಹೇಳುತ್ತಿದ್ದೆ. ಇದರಿಂದ ನಿಮ್ಮ ಹೆಸರು ಉಳಿಯುತ್ತದೆ, ಲಕ್ಷಾಂತರ ಜನ, ಕೋಟ್ಯಂತರ ಜನರು ನಿಮ್ಮ ಹೆಸರನ್ನು ಹೇಳುತ್ತಾರೆ. ದಯಮಾಡಿ ಈ ಕಾರ್ಯಕ್ರಮವನ್ನು ಈ ಯೋಜನೆಯನ್ನು ಅತಿ ತುರ್ತಾಗಿ ಜಾರಿಗೆ ಕೊಡಿ, ತಾಂತ್ರಿಕ ವರದಿಗೆ ಇಂಜಿನಿಯರ್‌ಗಳು ಬಹಳ ಶ್ರಮಿಸಿದ್ದಾರೆ, ಅವರೆಲ್ಲರಿಗೂ

ಕೃತಜ್ಞತೆಯನ್ನು ಸಲ್ಲಿಸಿ, ದಯವಿಟ್ಟು ಕೊಡಿ ಎಂದು ಹೇಳಿ, ತಮಗೆ ಧನ್ಯವಾದ ಗಳನ್ನು ಹೇಳುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ..

ಶ್ರೀ ಕೆ.ಎಸ್.ಮಂಜುನಾಥ್‌ಗೌಡ (ಮಾಲೂರು): ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ, ಕೋಲಾರ, ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪರವಾಗಿ ಕಳೆದ 40 ವರ್ಷಗಳಿಂದ ಯಾವ್ಯಾವ ಸರ್ಕಾರಗಳು ಆಳ್ವಿಕೆ ಮಾಡಿವೆ. ನಾವು ಆ ಎಲ್ಲಾ ಸರ್ಕಾರಗಳನ್ನು ಖಂಡಿಸುತ್ತಿದ್ದೇವೆ. ನಮಗೆ ಕುಡಿಯುವ ನೀರು ಕೊಡುವುದರಲ್ಲಿ ವಿಫಲವಾಗಿರುವ ಎಲ್ಲಾ ಸರ್ಕಾರಗಳು 45 ವರ್ಷಗಳಿಂದ ನಮ್ಮನ್ನು ಈ ಸ್ಥಿತಿಗೆ ತಂದಿದ್ದಿರಂದು, ನಾವು ಎಲ್ಲಾ ಸರ್ಕಾರಗಳನ್ನು ಖಂಡಿಸಿ, ನಾನು ಈ ವಿಷಯವನ್ನು ಮಾತನಾಡುತ್ತಿದ್ದೇನೆ. ಮೊದಲನೆಯದಾಗಿ, ನಮ್ಮ ಕಡೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಮಂಡ್ಯ ಕಡೆ ಮತ್ತು ಉತ್ತರ ಕರ್ನಾಟಕದ ಕಡೆಗಳಲ್ಲಿ ನೋಡಬಹುದು, ಅಲ್ಲಿ ತುಂಬಾ ನೀರು ಹರಿದು ಹೋಗುತ್ತಿದೆ, ಅಂದರೂ ಅಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಮ್ಮಲ್ಲಿ ಮೊಂಡು ಜನರು.

ಅಧ್ಯಕ್ಷರು : ಬುದ್ದಿವಂತರು !...

ಶ್ರೀ ಕೆ.ಎಸ್.ಮಂಜುನಾಥ ಗೌಡ:– ಕುಡಿಯುವುದಕ್ಕೆ ನೀರು ಇಲ್ಲವೆಂದರೂ, drip irrigation ಮಾಡಿ ಆತ್ಮಹತ್ಯೆ ಮಾಡಿಕೊಳ್ಳದೇ ನಾವು ಮನಸ್ಥೈರ್ಯ ಗಟ್ಟಿ ಮಾಡಿಕೊಂಡು ಜೀವನ ಮಾಡುತ್ತಿದ್ದೇವೆ. ನಾವು ಮೊನ್ನೆ ಮಂಗಳೂರಿಗೆ ಹೋಗಿದ್ದವು, ಅಲ್ಲಿ ನಮ್ಮ ಸ್ನೇಹಿತರು ಮೀನು ಸತ್ತು ಹೋಗುತ್ತದೆಂದು ಹೇಳುತ್ತಾರೆ. ಅಂದರೆ ನಾವು ಸತ್ತರೂ ಪರವಾಗಿಲ್ಲ, ಇವರಿಗೆ ಮೀನು ಬದುಕಬೇಕು. ನಾವು ಮೀನಿಗಿಂತ ಕಡ ಆಗಿದ್ದೇವೆಯೇ?

ಶ್ರೀ ಬಿ.ರಮಾನಾಥ ರೈ : ಯಾರು ಹೇಳಿದ್ದು? ತಾವು ಹಾಗೆ ಹೇಳಬಾರದು.

ಶ್ರೀ ಕೆ.ಎಸ್.ಮಂಜುನಾಥ ಗೌಡ:– ಎಲ್ಲ ಕಡೆ ಆ ಭಾವನೆ ಇದೆ, ಎರಡು ಸಾವಿರ ಟಿ.ಎಂ.ಸಿ. ನೀರು Waste ಆಗುತ್ತಿದೆ, ಸಮುದ್ರಕ್ಕೆ ನೀರು ಬೇಕು, ಮೀನು ಬದುಕಬೇಕೆಂದು ಹೇಳುತ್ತೀರಿ.

ಅಧ್ಯಕ್ಷರು : ಹೊಳೆ ನೀರು ಸಮುದಕ್ಕೆ ಸೇರುವ ಜಾಗದಲ್ಲಿ ಕಂಡಿಕೆ ಮೀನು ಎಂದು ಸಿಗುತ್ತದೆ. ಆದನ್ನು ತಿನ್ನುವುದಕ್ಕೆ ಬಳಸಿಕೊಳ್ಳಿ, ಅದನ್ನೆಲ್ಲ ಹೇಳುವುದಕ್ಕೆ ಹೋಗಬೇಡಿ,

ಶ್ರೀ ಕೆ.ಎಸ್.ಮಂಜುನಾಥಗೌಡ : ನಮಗೆ ಕುಡಿಯುವುದಕ್ಕೆ ನೀರಿಲ್ಲ. 1400 ಅಡಿ ಆಳಕ್ಕೆ ಕೊರೆದರೂ ನೀರು ಸಿಕ್ಕುತ್ತಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಮಾನ್ಯ ರಮಾನಾಥ ರೈರವರು ಇದ್ದಾರೆ. 15–20 ವರ್ಷಗಳಿಂದ ನೇತ್ರಾವತಿ ನದಿ, ನೇತ್ರಾವತಿ ತಿರುವು ಎನ್ನುವ ಬಗ್ಗೆ ಚರ್ಚೆ ನಡೆಯುತ್ತಿದೆ. ನಾನು ಏನು ಹೇಳುತ್ತೇನೆ ಎಂದರೆ ಆ ಭಾಗದ 15–20 ಜನ ಮತ್ತು ಈ ಕಡೆಯಿರುವ ನೀರಿಗಾಗಿ ಸಫರ್ ಆಗಿರುವ 15–20 ಜನರನ್ನು ತಮ್ಮ ನೇತೃತ್ವದಲ್ಲಿ ಸೇರಿಸಿ ಚರ್ಚೆ ಮಾದಿ ಇದರ ಬಗ್ಗೆ ಏನಾದರೊಂದು ನಿಲುವಿಗೆ ಬರುವಂಥ ಕೆಲಸ ಮಾಡಿದರೆ ಬದಲಾವಣೆ ಬರುತ್ತದೆ. ಆ ರೀತಿಯ ಆಲೋಚನೆ ಮಾಡದೇ ನಾವು ಅವರನ್ನು ಟೀಕೆ ಮಾಡುವುದು, ಅವರು ನಮ್ಮನ್ನು ಟೀಕೆ ಮಾಡುತ್ತಾರೆ ಎನ್ನುವ ಭಾವನೆ ಬೇಡ. ಎಲ್ಲರೂ ಕುಳಿತು ಚರ್ಚೆ ಮಾಡುವುದು ಬಹಳ ಒಳ್ಳೆಯದು.

ಶ್ರೀ ಕೆ.ಎಸ್.ಮಂಜುನಾಥಗೌಡ : ಎತ್ತಿನಹೊಳೆ ಯೋಜನೆಯ ಬಗ್ಗೆ ಮಾತನಾಡುವುದಕ್ಕೆ ಮೊದಲು ಕೆಲವು ಲಿಫ್ಟ್ ಇರಿಗೇಷನ್‌ಗಳ ಬಗ್ಗೆ ಹೇಳುತ್ತೇನೆ. ನಮಗೆ ಬಂದಿರುವ ಮಾಹಿತಿ ಪ್ರಕಾರ, ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟಿನವರು ಕೊಟ್ಟಿರುವ ಮಾಹಿತಿ ಪ್ರಕಾರ, ಇವತ್ತಿನ ದಿನಾಂಕಕ್ಕೆ 173 ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ಗಳು ಈಗಾಗಲೇ ಕೊಲ್ಯಾಪ್ಸ್ ಆಗಿವೆ, ವರ್ಕಿಂಗ್ ಕಂಡೀಷನ್‌ನಲ್ಲಿಲ್ಲ. ಅಷ್ಟು ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ಗಳು ವಿಫಲವಾಗಿರುವುದಕ್ಕೆ ಕಾರಣರಾರು? ಆ ಅಧಿಕಾರಿಗಳನ್ನೇನಾದರೂ ನೀವು ದಂಡಿಸಿರುವಿರಾ? ನಾಳೆ ಎತ್ತಿನಹೊಳೆ ಯೋಜನೆಯೂ ಈ ರೀತಿ ವಿಫಲವಾದರೆ ನಾವು ಯಾರನ್ನು ಕೇಳುವುದು? ದಯವಿಟ್ಟು ಇವುಗಳಿಗೆಲ್ಲ ನೀವು ಸ್ಪಷ್ಟೀಕರಣ ಕೊಡಲೇಬೇಕು. ಕಿಬ್ಬನಹಳ್ಳಿ, ಚಿಕ್ಕನಾಯಕನಹಳ್ಳಿ, ಹರಪನಹಳ್ಳಿ ಇಲ್ಲೆಲ್ಲ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ಗಳು ವಿಫಲವಾಗಿವೆ. ಹಾಗಾಗಿ, ಇದೂ ಸಹ ಈ ರೀತಿಯಾಗಬಾರದು. ನಮ್ಮ ಮಾಲೂರಿನಲ್ಲಿ ಮಾರ್ಕಂಡೇಯ ಡ್ಯಾಂ ಎಂದು ಇದೆ. ನಾನು ಈ ರೀತಿ ಹೇಳಿದರೆ ಯಾರೂ ತಪ್ಪು ತಿಳಿಯುವುದು ಬೇಡ, ಬೆಳಗ್ಗೆ ಶೌಚಾಲಯಕ್ಕೆ ಹೋದರೆ ತೊಳೆಯಲು ಅಲ್ಲಿ ನೀರಿಲ್ಲ. 20 ವರ್ಷಗಳಿಂದ ಈ ರೀತಿಯ ಪರಿಸ್ಥಿತಿ ಇದೆ. ಅದಕ್ಕೆ 40 ಕೋಟಿ ರೂಪಾಯಿಗಳ ಪೈಪ್‌ಲೈನ್ ಆಗಿದೆ. ಇದಕ್ಕೆ ಯಾರು ಹೊಣೆ? Fundamental engineering ದೋಷಗಳು ಎಲ್ಲ ಕಡೆ ಎದ್ದು ಕಾಣಿಸುತ್ತಿವೆ. ಹೀಗಾಗಿ, ಎತ್ತಿನಹೊಳೆ ಯೋಜನೆ ಎಂದರೆ ಅನುಮಾನಗಳ ಬೆಟ್ಟವೇ ಬೆಳೆದಿದೆ. ನಮಗೆ ನೀವು ಯಾವಾಗ ನೀರು ಕೊಡುತ್ತೀರಿ? ಶಂಕು ಸ್ಥಾಪನೆ 31ನೇ ತಾರೀಖು ಎಂದು date fix ಮಾಡಿದರು. ನಾವೆಲ್ಲ ಪೂಜೆಗೆ ಬರುತ್ತೇವೆ ಎಂದರೆ ಮತ್ತೆ ಮುಂದಕ್ಕೆ ಹಾಕುತ್ತಾರೆ. ಇದಕ್ಕೆ ಕಾರಣವೇನು?

ಶ್ರೀ ಕೆ.ಷಡಕ್ಷರಿ : ಮಾನ್ಯ ಅಧ್ಯಕ್ಷರೆ, ಅವರು ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಕಿಬ್ಬನಹಳ್ಳಿ ಪ್ರಾಜೆಕ್ಟ್ ನನ್ನ ಕ್ಷೇತ್ರದಲ್ಲಿ ಬರುತ್ತದೆ. ಅದು ವಿಫಲವಾಗಿಲ್ಲ ಕುಡಿಯುವ ನೀರಿನ ಯೋಜನೆ ಅಲ್ಲಿ ನಡೆಯುತ್ತಿದೆ.

ಅಧ್ಯಕ್ಷರು: ವಿಫಲವಾಗಿಲ್ಲ ಎಂದು ಹೇಳಿಬಿಡಿ ಸಾಕು. ಅವರದ್ದು ಅವರು ಹೇಳುತ್ತಾರೆ, ನಿಮ್ಮದು ನೀವು ಹೇಳಿ, ಶಿವಲಿಂಗೇಗೌಡರು ತಂದಿರುವ ಈ ವಿಚಾರದ ಬಗ್ಗೆ ಈ ಯೋಜನೆಯನ್ನು ಏಕೆ ಮಾಡಬೇಕು, ಏನು ವಿಷಯ ಎನ್ನುವುದನ್ನು ಮಾತ್ರ ಹೇಳಿ ಎಂದರೆ ನೀವು ಬೇರೆ ಎಲ್ಲದಕ್ಕೂ ಹೋಗುತ್ತೀರಿ.

ಶ್ರೀ ಕೆ.ಎಸ್.ಮಂಜುನಾಥಗೌಡ : ಈ ಎತ್ತಿನಹೊಳೆ ಯೋಜನೆಯನ್ನು ಮಾಡುತ್ತಿರುವ ಸಮಯ ಎಲ್ಲದಕ್ಕೂ ಅನುಮಾನವನ್ನು ಉಂಟು ಮಾಡುತ್ತಿದೆ. ಮುಂಬರುವ ಎಲೆಕ್ಷನ್‌ಗೋಸ್ಕರ ಮಾಡುತ್ತಿದ್ದಾರೆಯೇ? ನೀವು ಪೂಜೆಯನ್ನು ಏಕೆ ಚಿಕ್ಕಬಳ್ಳಾಪುರದಲ್ಲಿ ಮಾಡುತ್ತೀರಿ? ಎತ್ತಿನಹೊಳೆಯಲ್ಲಿ ಮಾಡಿ, ಎಲ್ಲ ವಿಷಯಗಳಲ್ಲೂ ಅನುಮಾನಗಳು ಉದ್ಭವವಾಗುತ್ತಿವೆ. ನಮ್ಮ ಮಾಲೂರು ತಾಲ್ಲೂಕಿಗೆ ಎಷ್ಟು ನೀರು ಕೊಡುತ್ತೀರಿ? ಇದು ಬರುತ್ತದೋ, ಇಲ್ಲವೋ? ಆಮೇಲೆ ಇದು ವಿಫಲವಾದರೆ ಇದಕ್ಕೆ ಅಕೌಂಟಬಿಲಿಟಿ ಯಾರು? ಎತ್ತಿನಹೊಳೆ ಯೋಜನೆಗೆ ಟೆಂಡರ್ ಹಾಕಿರುವ ಕಂಪನಿಗಳೆಲ್ಲ ಆಂಧ್ರ ಮೂಲದ ಕಂಪನಿಗಳಾಗಿದ್ದು, ನೀವು ಅವರ track records check ಮಾಡಬೇಕು. ಅದರಲ್ಲಿ ಒಂದು ಕಂಪನಿಯಾದ ಜಿ.ವಿ.ಪಿ.ಆರ್. ಎನ್ನುವ ಕಂಪನಿಯು ಶಿವಮೊಗ್ಗದಲ್ಲಿ ಯು.ಜಿ.ಡಿ. ಕೆಲಸ ಮಾಡದೇ ಬ್ಲಾಕ್ ಲಿಸ್ಟ್‌ನಲ್ಲಿದೆ.

ಅಧ್ಯಕ್ಷರು : ಈ ಪ್ರಾಜೆಕ್ಟ್‌ಅನ್ನು ಈ ಕಾರಣಕ್ಕಾಗಿ ಮಾಡಿ ಎಂದು ಶಿವಲಿಂಗೇಗೌಡರು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಸಮರ್ಥನೆ ಮಾಡಿ ಏನಾದರೂ ಇದ್ದರೆ ಹೇಳಿ. ಬಾಕಿ ವಿಚಾರಗಳಾದ ಕಂಟ್ರ್ಯಾಕ್ಟರ್ ಮತ್ತೊಂದನ್ನು ಆಮೇಲೆ ನೋಡೋಣ.

ಶ್ರೀ ಕೆ.ಎಸ್.ಮಂಜುನಾಥಗೌಡ : ನಾವು ಈ ಯೋಜನೆಯನ್ನು ಸ್ವಾಗತ ಮಾಡುತ್ತಿದ್ದೇವೆ. ಆದರೆ ಏಕೆ ಈ ವಿಳಂಬ? ಸುಮ್ಮನೆ ಮುಂದೆ ತಳ್ಳುತ್ತಿದ್ದಾರೆ. ಕೇವಲ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಯೋಜನೆಗೆ ಅಡಿಗಲ್ಲನ್ನು ಹಾಕಿ ನಂತರ ನೀರಿಲ್ಲ ಎಂದರೆ ಏನು ಮಾಡುವುದು? ಎಂ.ಬಿ.ಪಾಟೀಲರೇ

(ಜಲ ಸಂಪನ್ಮೂಲ ಸಚಿವರು) ನೀವು ಈ ವಿಚಾರವನ್ನು ಮಾತನಾಡುವಾಗ ಯಾವಾಗಲೂ ಗೊಂದಲದಲ್ಲಿರುತ್ತೀರಿ, ಎತ್ತಿನಹೊಳೆ ಯೋಜನೆ ಎಂದರೆ ಭಯ ಪಡುತ್ತೀರಿ. ಮಾತನಾಡಬೇಕಾದರೆ ನಿಮಗೆ ವಿಶ್ವಾಸವಿಲ್ಲ. ಇದನ್ನು ಬಚ್ಚಿಟ್ಟುಕೊಂಡು ಮಾಡುವ ಅವಶ್ಯಕತೆಯಿಲ್ಲ. ನೀವು ಪೂಜೆ ಮಾಡಿದರೆ ಮೂರು ಲಕ್ಷ ಜನ ಬಂದು ನಿಮಗೆ ಹೂವಿನ ಹಾರ ಹಾಕುತ್ತಾರೆ. ನೀವು ಭಯ ಪಡುತ್ತೀರಿ, ಪೊಲೀಸರನ್ನು ಇಟ್ಟುಕೊಂಡು ಅಡಿಗಲ್ಲನ್ನು ಹಾಕುತ್ತೇವೆ ಎನ್ನುತ್ತೀರಿ. ನಾವೆಲ್ಲ ನಿಮ್ಮ ಜೊತೆ ಇದ್ದೇವಲ್ಲ ನಿಮಗೆ ಪೊಲೀಸ್ ಏಕೆ ಬೇಕು? ಶಿವಲಿಂಗೇಗೌಡರು ಹೇಳಿದ ಹಾಗೆ, ನೀವೇನಾದರೂ ಇದರಲ್ಲಿ ಮೋಸ ಮಾಡಿದರೆ ಜನರು ನಿಮ್ಮನ್ನು ಕ್ಷಮಿಸುವುದಿಲ್ಲ. 31ನೇ ತಾರೀಖು ಪೂಜೆ ಮಾಡೇ ಮಾಡುತ್ತಾರೆ ಎಂದು ನಾನು ಕುಮಾರಣ್ಣನವರ ಹತ್ತಿರ ಗಲಾಟೆ ಮಾಡಿದೆ, ಇಲ್ಲ, ಅವರು ಮಾಡುವುದಿಲ್ಲ ಎಂದು ಕುಮಾರಣ್ಣ ಹೇಳಿದರು. ಅವರು ಹೇಳಿದಂತೆಯೇ ಆಯಿತು, ಪೂಜೆ ಮಾಡಲೇ ಇಲ್ಲ. ದಯವಿಟ್ಟು ಇಂಥದ್ದನ್ನು ಮಾಡಬೇಡಿ. ಇಲ್ಲೊಂದು ಸ್ಟೇಟಮೆಂಟ್, ಮಂಗಳೂರಿನಲ್ಲೊಂದು ಸ್ಟೇಟಮೆಂಟ್ ಕೊಡುವಂಥದ್ದು ಆಗುವುದು ಬೇಡ. ನಾವೆಲ್ಲ ನಿಮ್ಮನ್ನು ನಂಬಿದ್ದೇವೆ. ನಮಗೆ ನೀರಿಲ್ಲ ಎಂದರೆ ನಾವು ಬದುಕುವುದಕ್ಕೇ ಆಗುವುದಿಲ್ಲ. ನಾವು ಆ ಪರಿಸ್ಥಿತಿಯಲ್ಲಿದ್ದೇವೆ. ಫ್ಲೋರೈಡ್ ಕಂಟೆಂಟ್ ಇರುವ ನೀರನ್ನು ಅಂದರೆ ವಿಷ ಕುಡಿದು ನಾವು ಬದುಕುತ್ತಿದ್ದೇವೆ. ಇನ್ನು 7–8 ವರ್ಷವಾದರೆ ನಮ್ಮ ಕೈ–ಕಾಲುಗಳು ಏನಾಗುತ್ತವೆಂದು ನಮಗೆ ಗೊತ್ತಿಲ್ಲ. ದಯವಿಟ್ಟು ಪಾಟೀಲರೇ, ನಿಮಗೆ ನಮಸ್ಕಾರ ಮಾಡುತ್ತಿದ್ದೇವೆ, ನಮಗೆ ನೀರು ಬೇಕು. ಇದರಲ್ಲಿ ರಾಜಕಾರಣ ಬೇಡ. ಸುಮಾರು 40–50 ವರ್ಷಗಳಿಂದ ಎಲ್ಲ ಸರ್ಕಾರಗಳೂ ನಮಗೆ ನೀರು ಕೊಡುವುದರಲ್ಲಿ ವಿಫಲವಾಗಿವೆ, ಎಲ್ಲ ಸರ್ಕಾರಗಳು, ಅಧಿಕಾರಿಗಳು ನಮಗೆ ಮೋಸ ಮಾಡಿದ್ದಾರೆ ದಯವಿಟ್ಟು ನಮಗೆ ನೀರು ಕೊಡುವಂಥ ಕೆಲಸವಾಗಲಿ ಎಂದು ನಿಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಕೃಷ್ಣಾರೆಡ್ಡಿ (ಚಿಂತಾಮಣಿ): ಮಾನ್ಯ ಅಧ್ಯಕ್ಷರೆ, ನಾವು ಐದಾರು ಜಿಲ್ಲೆಗಳಲ್ಲಿ ಹಲವಾರು ವರ್ಷಗಳಿಂದ ನೀರಾವರಿ ಕೆಲಸಗಳಿಗಾಗಿ ಅನೇಕ ಹೋರಾಟಗಳನ್ನು ಮಾಡಿದ್ದೇವೆ. ಆದರೆ ಇವತ್ತಿನವರೆಗೂ ನೀರಾವರಿ ಯೋಜನೆಗಳು ನಮ್ಮ ಐದಾರು ಜಿಲ್ಲೆಗಳಿಗೆ ಬರಲಿಲ್ಲ. ನೀರಾವರಿ ಯೋಜನೆಗಳಿಂದ ನಾವೆಲ್ಲರೂ ವಂಚಿತರಾಗಿದ್ದೇವೆ. ಕರ್ನಾಟಕ ಸರ್ಕಾರಕ್ಕೆ ನಮ್ಮ ವಿನಂತಿ ಏನೆಂದರೆ, ನಮ್ಮ ಭಾಗದ ಐದಾರು ಜಿಲ್ಲೆಗಳಲ್ಲಿ ಬರುವ ನಗರಗಳಿಗೆ ಕೆರೆಗಳಿಂದ ನೀರು ಸರಬರಾಜು ಆಗುತ್ತಿತ್ತು. ಆದರೆ ಇವತ್ತು ಎಲ್ಲ ಕೆರೆಗಳು ಸಂಪೂರ್ಣವಾಗಿ ಒಣಗಿ ಹೋಗಿವೆ. ಕೊಳವೆ ಬಾವಿಗಳೂ ಒಣಗಿ ಹೋಗಿವೆ. ಈ ಎತ್ತಿನಹೊಳೆ ಯೋಜನೆಯ ಬಗ್ಗೆ ಸರ್ಕಾರ ಐದು ಜಿಲ್ಲೆಗಳ ಜನಪ್ರತಿನಿಧಿಗಳಿಗೆ ಬಹಳ ಸ್ಪಷ್ಟವಾದ ಉತ್ತರವನ್ನು ಕೊಡಬೇಕಾಗಿದೆ. ಒಂದೊಂದು ತಾಲ್ಲೂಕಿಗೆ ಎಷ್ಟು ನೀರು ಕೊಡುತ್ತೀರಿ ಎನ್ನುವುದನ್ನು ಸ್ಪಷ್ಟಪಡಿಸಬೇಕಾಗಿದೆ. ಸರ್ಕಾರ ಇವತ್ತು ದ್ವಿಮುಖ ನೀತಿಯನ್ನು ಅನುಸರಿಸುತ್ತಿದೆ. ಏಕೆಂದರೆ, ಇವತ್ತು ಗ್ರಾಮೀಣ ಭಾಗದಲ್ಲಿ ಬೋರ್‌ವೆಲ್ ಕೊರೆಸಿದರೆ, ಅದಕ್ಕೆ ಬೇಗ ಮೋಟರ್ ಹಾಕಿಕೊಡಿ ಎಂದರೆ ಅದಕ್ಕೆ ಟೆಂಡರ್ ಆಗಬೇಕು, ಟೆಂಡರ್‌ಗೆ 45 ದಿನ ಟೈಂ ಇರುತ್ತದೆ, ಟೆಂಡರ್ ಆದಮೇಲೆ ಕೊಡುತ್ತೇವೆ ಎಂದು ಹೇಳತ್ತಾರೆ. ಆದರೆ ಸಾವಿರಾರು ಕೋಟಿ ರೂಪಾಯಿಗಳ ಈ ಎತ್ತಿನಹೊಳೆ ಯೋಜನೆಗೆ ತರಾತುರಿಯಲ್ಲಿ ಏಕಾಏಕಿಯಾಗಿ 31ನೇ ತಾರೀಖು ಶಂಕು ಸ್ಥಾಪನೆ ಮಾಡಲು ಹೊರಟಿದ್ದಾರೆ. ಒಂದು ಕಡೆ ನೀವು ಮೊದಲು ಟೆಂಡರ್ ಆಗಬೇಕು ಎಂದು ಹೇಳುತ್ತೀರಿ. ಆದರೆ ಸಾವಿರಾರು ಕೋಟಿ ರೂಪಾಯಿಗಳ ಈ ಯೋಜನೆಗೆ ಟೆಂಡರ್ ಇನ್ನೂ ಫೈನಲೈಸ್ ಆಗಿಲ್ಲ. ಅದಕ್ಕೂ ಮೊದಲೇ ಅಂದರೆ 31ನೇ ತಾರೀಖು ಶಂಕು ಸ್ಥಾಪನೆ ಮಾಡುತ್ತೇವೆ ಎಂದರೆ ಎಲ್ಲೋ ಒಂದು ಕಡೆ ಇದರ ಬಗ್ಗೆ ಅನುಮಾನ ಹುಟ್ಟುವಂಥದ್ದು ಆಗುತ್ತದೆ. ಇದನ್ನು ಸ್ಪಷ್ಟಪಡಿಸಬೇಕು. ದಯಮಾಡಿ 31ನೇ ತಾರೀಖು ಮಾಡುವಂಥ ಶಂಕು ಸ್ಥಾಪನೆಯನ್ನು ಟೆಂಡರ್ ಫೈನಲೈಸ್ ಆದಮೇಲೆ ಮುಂದಿನ ದಿನಾಂಕದಲ್ಲಿ ಅಂದರೆ ಫೆಬ್ರವರಿ ಎರಡನೇ ವಾರದಲ್ಲಿ ಮಾಡಿದರೆ ನಮ್ಮ ಭಾಗದ ಐದು ಜಿಲ್ಲೆಗಳ ಎಲ್ಲ ಜನಪ್ರತಿನಿಧಿಗಳು ಲಕ್ಷಾಂತರ ಜೊತೆಗೆ

ಬಂದು ಅದರಲ್ಲಿ ಭಾಗವಹಿಸುತ್ತೇವೆ. ಕರ್ನಾಟಕ ಸರ್ಕಾರ ಒಂದು ಒಳ್ಳೆಯ ಕಾರ್ಯಕ್ರಮ ಮಾಡುತ್ತಿದೆ ಎಂದು ಖುಷಿಯಿಂದ ಭಾಗವಹಿಸುತ್ತೇವೆ. ಹಾಗಾಗಿ ಅದಕ್ಕೆ ಬಹಳ ಅಚ್ಚುಕಟ್ಟಾಗಿ ಈ ಯೋಜನೆಯ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಆ ನಂತರ ಶಂಕು ಸ್ಥಾಪನೆ ಮಾಡಿದರೆ ಅದಕ್ಕೂ ಒಂದು ಅರ್ಥವಿರುತ್ತದೆ. ತರಾತುರಿಯಲ್ಲಿ 31ನೇ ತಾರೀಖು ಮಾಡುತ್ತಿದ್ದಾರೆ ಎಂದರೆ ಎಲ್ಲರಿಗೂ ಅದರ ಬಗ್ಗೆ ಅನುಮಾನ ಬರುವಂಥದ್ದು ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ನವೆಂಬರ್ 21ನೇ ತಾರೀಖು ತಮ್ಮ ಕಛೇರಿ ಕೃಷ್ಣಾದಲ್ಲಿ ಸಂಬಂಧಪಟ್ಟಂಥ ಎಲ್ಲ ಶಾಸಕರನ್ನು ಕರೆದು ಒಂದು ಸಭೆಯನ್ನು ಮಾಡಿದ್ದಾರೆ. ನಮ್ಮ ಮತ್ತೊಂದು ಬೇಡಿಕೆ ಎಂದರೆ, ಈ ಯೋಜನೆಗೆ ನಮ್ಮ ವಿರೋಧವಿಲ್ಲ. ಆದರೆ ಟೆಂಡರ್ ಫೈನಲೈಸ್ ಆದಮೇಲೆ ಈ ಎತ್ತಿನಹೊಳೆ ಯೋಜನೆಗೆ ಶಂಕು ಸ್ಥಾಪನೆಯನ್ನು ಮಾಡಲಿ. ಅದರ ಜೊತೆಜೊತೆಯಲ್ಲೇ ಪರಮಶಿವಯ್ಯ ವರದಿಯ ಅನುಷ್ಠಾನದ ಪ್ರಕ್ರಿಯೆಯನ್ನೂ ಮಾಡಬೇಕು ಎನ್ನುವ ವಿನಂತಿಯನ್ನು ನಾವು ಇವತ್ತು ಸರ್ಕಾರಕ್ಕೆ ಮಾಡುತ್ತಿದ್ದೇವೆ.

ವೈ.ಎನ್.ರುದೇಶ್‌ಗೌಡ (ಬೇಲೂರು) : ಎತ್ತಿನಹೊಳೆ ವಿಚಾರವಾಗಿ ತುಂಬಾ ಜನ ಶಾಸಕರು ಮಾತನಾಡಿದ್ದಾರೆ, ಈಗ ನಾನು ಹೇಳುವುದು ಇಷ್ಟೇ ಈ Scheme ಆಗಲೇಬೇಕು. ಏಕೆಂದರೆ ಈ ಭಾಗದ 5–6 ಜಿಲ್ಲೆಗಳಿಗೆ ಕುಡಿಯುವ ನೀರಿಗೆ ಮೊದಲನೇ ಆದ್ಯತೆ ಕೊಡಬೇಕು. ನನ್ನ ಕ್ಷೇತ್ರ ಶಿವಲಿಂಗೇಗೌಡರ ಪಕ್ಕದ ಕ್ಷೇತ. ಶಿವಲಿಂಗೇಗೌಡರ ಪಕ್ಕದ ಕ್ಷೇತ್ರ ಎಂದರೆ ಅವರು ಇದೆಯೋ ಆ ತೊಂದರೆ ನನ್ನ ಕ್ಷೇತ್ರಕ್ಕೂ ಇದೆ. ಹಾಗಾಗಿ ಇದನ್ನು ಅರ್ಥಮಾಡಿಕೊಳ್ಳಬೇಕಾಗುತ್ತೆ ಎತ್ತಿನಹೊಳೆಯ ಈ Scheme ಆಗಬೇಕು, ನಿಜವಾಗಿಯೂ ಸಹ ನಮ್ಮ ರಾಜ್ಯದಲ್ಲಿ ಈ 5–6 ಜಿಲ್ಲೆಗಳು ಕುಡಿಯುವ ನೀರಿಗೋಸ್ಕರ ಯಾವತ್ತಿಗೂ ಸಹ ಬರದಿಂದ ಒದ್ದಾಡುತ್ತಿದೆ. Fluoride ಅಂಶ ಹೆಚ್ಚಾಗಿರುವುದರಿಂದ ಅವರ ಆರೋಗ್ಯದ ಮೇಲೂ ಸಹ ಇದರಿಂದ ಪರಿಣಾಮವಾಗುತ್ತಿದೆ: ಹಾಗಾಗಿ ನಾನು ಹೇಳುವುದು ಇಷ್ಟೆ ಈ ಅಂಶವನ್ನು ತಾವು ಪರಿಗಣನೆಗೆ ಇಟ್ಟುಕೊಂಡು ಎತ್ತಿನಹೊಳೆ Scheme ಅನ್ನು ಆದಷ್ಟು

ಬೇಗ ಶಂಕುಸ್ಥಾಪನೆ ಮಾಡಿ ಕಾರ್ಯರೂಪಕ್ಕೆ ತಂದು ಆದಷ್ಟು ಬೇಗ in - time ನಲ್ಲಿ ನೀರು ಹರಿಸಿದರೆ ನಿಜವಾಗಿಯೂ ಸಹ ಈ 5 ಜಿಲ್ಲೆಗಳಿಗೆ ನೀರು ಕೊಟ್ಟ ಹಾಗೆ ಆಗುತ್ತದೆ. ರಾಜ್ಯದ ಎಲ್ಲಾ ಜಿಲ್ಲೆಗಳವರು ನೀರು ತೆಗೆದುಕೊಳ್ಳುತ್ತಿದ್ದಾರೆ. ಇದರಲ್ಲಿ ನೀರಿಲ್ಲ ಎನ್ನುವ 5–6 ಜಿಲ್ಲೆಗಳಿವೆ. ಈ 5–6 ಜಿಲ್ಲೆಗಳಿಗೂ ಸಹ ನೀರು ಕೊಟ್ಟಹಾಗೆ ಆಗುತ್ತದೆ. ಎತ್ತಿನಹೊಳೆ Scheme ಅನ್ನು ಆದಷ್ಟು ಬೇಗ, ತಕ್ಷಣ ತರಬೇಕೆನ್ನುವ ಅಂಶವನ್ನು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಪಿ.ಆರ್.ಸುಧಾಕರಲಾಲ್ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಅವರು ಉತ್ತರ ಹೇಳಿದ ಮೇಲೆ ಏನಾದರೂ ಇದ್ದರೆ ಹೇಳಿ.

ಶ್ರೀ ಪಿ.ಆರ್.ಸುಧಾಕರಲಾಲ್ (ಕೊರಟಗೆರೆ) : ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯಲ್ಲಿ ಬರಪೀಡಿತ ಪ್ರದೇಶಗಳಾದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸಲು ಎತ್ತಿನಹೊಳೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಆದರೆ, ನಮ್ಮ ಪ್ರಶ್ನೆ ಇರುವುದು ನಮ್ಮ ತುಮಕೂರು ಜಿಲ್ಲೆಗೆ ಅಥವಾ ಕೊರಟಗೆರೆ ಕ್ಷೇತ್ರಕ್ಕೆ ಎಷ್ಟು ನೀರನ್ನು ಕೊಡುತ್ತಾರೆನ್ನುವ ವಿಚಾರದ ಬಗ್ಗೆ ಇವತ್ತಿನವರೆಗೂ ನಮಗೆ ಮಾಹಿತಿ ಸಿಕ್ಕಿಲ್ಲ.

ಅಧ್ಯಕ್ಷರು : ಈಗ ಹೇಳುತ್ತಾರೆ.

ಶ್ರೀ ಪಿ.ಆರ್.ಸುಧಾಕರಲಾಲ್ : ಈಗಾಗಲೇ ಜಲಸಂಪನ್ಮೂಲ ಸಚಿವರು 2–3 ಸಭೆಗಳನ್ನು ಮಾಡಿದ್ದಾರೆ. ಆದರೆ, ಯಾವುದಕ್ಕೂ ನಮಗೆ ಆಹ್ವಾನ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಕರೆದ ಸಭೆಯಲ್ಲೂ ಕೂಡ ನಮಗೆ ಯಾವುದೇ ರೀತಿಯಿಂದ ಆಹ್ವಾನ ಬರಲಿಲ್ಲ. ಹಾಗಾಗಿ ನಾನು

ಸರ್ಕಾರದ ಸ್ಪಷ್ಟನೆ ಕೇಳುತ್ತಿದ್ದೇನೆ. ತಾವು ಕೊರಟಗೆರೆಯನ್ನು ಸೇರಿಸಬೇಕು. ಕೊರಟಗೆರೆಯಲ್ಲಿ ಇವತ್ತು ನಿಜವಾಗಿಯೂ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ನಮ್ಮ ಜನರಿದ್ದಾರೆ. ನಾನಾದರೂ ಹೇಳಲಿಕ್ಕೆ ಬಯಸುವುದೇನೆಂದರೆ, ಹಿಂದಿನ ಸರ್ಕಾರಗಳವರು ಹೇಳಿದರು, Upper Bhadra ಯೋಜನೆಯಲ್ಲಿ ನೀರನ್ನು ಕೊಡುತ್ತೇವೆ ಎಂದು. ಆದರೆ, ಆ ನೀರು ಕೊಡಲಿಲ್ಲ. ಆನಂತರದಲ್ಲಿ ನೇತ್ರಾವತಿ ತಿರುವು ಎಂದು ಹೇಳಿದರು. ಪರಮಶಿವಯ್ಯ ವರದಿ ಎಂದು ಹೇಳಿದರು. ಈಗ ಎತ್ತಿನಹೊಳೆ ಯೋಜನೆ ಎಂದು ಹೇಳುತ್ತಿದ್ದಾರೆ. ಹಾಗಾಗಿ ಹಿಂದಿನಂತೆ ಇದು ಭರವಸೆಯಾಗಿಯೇ ಉಳಿಯಬಾರದು. ನಮ್ಮ ಭಾಗದ ಬಯಲುಸೀಮೆಯ ಜನರೇನಿದ್ದೇವೆ, ನಮಗೆ ಬಹಳ ನೋವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಸುಮಾರು 46% irrigation ಮಾಡುತ್ತಿದ್ದಾರೆ. ಮೈಸೂರು ಭಾಗದಲ್ಲಿ ಸುಮಾರು 36% irrigation ಮಾಡುತ್ತಿದ್ದಾರೆ. ಆದರೆ, ಬಯಲುಸೀಮೆ, ಮಧ್ಯ ಕರ್ನಾಟಕದ ಜನರೇನಿದ್ದೇವೆ, ಕೇವಲ 10% ಮಾತ್ರ ನಾವು irrigation ಮಾಡುತ್ತಿದ್ದೇವೆ. ಇವತ್ತು ನಾವು ಕುಡಿಯುವ ನೀರಿಗಾಗಿ ಕೇಳುತ್ತಿದ್ದೇವೆ. Irrigationಗೆ ಕೊಡಿ ಎಂದು ಕೇಳುತ್ತಿಲ್ಲ. ದಯವಿಟ್ಟು ಸರ್ಕಾರ ಬಹಳ ತ್ವರಿತವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು. ನಮ್ಮ ಜನರ ಸಹಾಯಕ್ಕೆ ಸರ್ಕಾರ ಇವತ್ತು ಬರಬೇಕೆಂದು ಹೇಳುತ್ತೇನೆ. ಮುಂದಿನ ದಿನಗಳಲ್ಲಿ ಈ ಸಭೆಗಳನ್ನು ನಡೆಸಿದ ಸಂದರ್ಭದಲ್ಲಿ ಕೊರಟಗೆರೆ ಮುಖಾಂತರವಾಗಿ ಎತ್ತಿನಹೊಳೆ ಹರಿಯುವುದರಿಂದ ನಮಗೂ ಕೂಡ ಆ ವಿಚಾರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಸದನದ ಸದಸ್ಯರು ಎತ್ತಿನಹೊಳೆ ಬಗ್ಗೆ ಸುದೀರ್ಘವಾಗಿ ಹೇಳಿದರು ಮತ್ತು ಚರ್ಚೆ ಮಾಡಿದ್ದಾರೆ. ಅದರಲ್ಲಿಯೂ ಶಿವಲಿಂಗೇಗೌಡರು ಹೆಚ್ಚು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿರುವ ಎಲ್ಲಾ ಸದಸ್ಯರಿಗೆ ನೀರಿನ ವಿಷಯದಲ್ಲಿ ಕಾಳಜಿ ಇದೆ. ಅವರವರ ಕ್ಷೇತ್ರಗಳಲ್ಲಿರುವ ತೊಂದರೆಗಳ ಬಗ್ಗೆ ಅವರ ಹೃದಯದಲ್ಲಿರುವ ನೋವಿನಿಂದಲೇ ಅವರು ಚರ್ಚೆ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಯವರು

ಉತ್ತರ ಕೊಡುವುದಕ್ಕೆ ಮುಂಚೆ ಒಂದು ಮಾತು ಹೇಳುತ್ತೇನೆ ಈಗ ಸಮಯ 6–00ಗಂಟೆ. ನನ್ನ ಹತ್ತಿರ ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ಇದೆ. 2011ರಲ್ಲಿ BJP ಸರ್ಕಾರದಲ್ಲಿ . . . . .

ಅಧ್ಯಕ್ಷರು : ಇನ್ನೂ ಬಹಳಷ್ಟು ವಿಚಾರಗಳಿವೆ .

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಬಸವರಾಜ ಬೊಮ್ಮಾಯಿಯವರು ಆಗ 9 TMC ನೀರು ಸಿಗಬಹುದು ಎಂದು ಹೇಳಿದ್ದರು. ಅದಕ್ಕೋಸ್ಕರವಾಗಿಯೇ ನಾನು ನಿಮಗೆ ಮನವಿ ಮಾಡುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ನನಗೆ ಎಷ್ಟು ಸಮಯಾವಕಾಶ ಕೊಡುತ್ತೀರೋ ಗೊತ್ತಿಲ್ಲ.

ಅಧ್ಯಕ್ಷರು : ಕೊಡೋಣ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನಾನು ಮಂತ್ರಿಯವರನ್ನು ಕೇಳುತ್ತೇನೆ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ನಾನು ಇವೆಲ್ಲಾ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಡಿಸೆಂಬರ್ 28ನೇ ತಾರೀಖು ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಪತ್ರ ಬರೆದೆ. ಅದರ ಕಾಪಿಯನ್ನು ಮಾನ್ಯ ನೀರಾವರಿ ಸಚಿವರಿಗೆ ಕಳುಹಿಸಿದ್ದೇನೆ. ಎತ್ತಿನಹೊಳೆ ಯೋಜನೆಗೆ ಸಂಬಂಧಪಟ್ಟಂತೆ ಸರ್ವಪಕ್ಷಗಳ ಸಭೆ ಕರೆಯಿರಿ ಎಂದು ಅವರಿಗೆ ಮನವಿ ಮಾಡಿ ಒಂದು ಪತ್ರ ಬರೆದೆ. ಇಲ್ಲಿಯವರೆಗೆ ನನಗೆ ಅದಕ್ಕೆ ಉತ್ತರ ಬಂದಿಲ್ಲ. 24 TMC ನೀರು ಸಿಗುತ್ತದೆ ಎಂದು ಹೊಸದಾಗಿ ವರದಿ ತೆಗೆದುಕೊಂಡಿದ್ದೇವೆಂದು ಸರ್ಕಾರ ಹೇಳುತ್ತಿದೆ. ಇದೆಲ್ಲದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ.

ಅಧ್ಯಕ್ಷರು: ಒಂದು ದಿವಸ ಬೇಕಾಗುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಾನು ಸಂಪೂರ್ಣ ಮಾಹಿತಿ ಇಟ್ಟಿದ್ದೇನೆ. ನಾಳೆ ನಾವು ಬೆಳಗ್ಗೆ ಯುವಚೇತನ ರ್‍ಯಾಲಿ ಇಟ್ಟುಕೊಂಡಿದ್ದೇವೆ. ಅಧಿವೇಶನ ಇನ್ನು ಎರಡು ದಿವಸ ನಡೆಯುತ್ತದೆ. ಹಲವಾರು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ. ನಿಮಗೆ ಹೇಳಬೇಕೆಂದರೆ, ಕಂದಾಯ ಇಲಾಖೆಗೆ ಸಂಬಂಧಪಟ್ಟ ಹಾಗೆ Question Hour ನಲ್ಲಿ ಪ್ರತಿನಿತ್ಯ ಸದಸ್ಯರು ಸರ್ಕಾರದ ಮುಂದೆ ಯಾವ ಪ್ರಶ್ನೆಗಳನ್ನು ಕೊಡುತ್ತಾರೆ, ಅದಕ್ಕೆ ಉತ್ತರ ಏನು ಕೊಡುತ್ತಿದ್ದಾರೆ, ಅದು ಕಂದಾಯ ಇಲಾಖೆಯಲ್ಲಿ ಎಷ್ಟರ ಮಟ್ಟಿಗೆ ಆ ಪ್ರಶ್ನಾವಳಿಯಲ್ಲಿ ಉತ್ತರ ಕೊಡುವುದು implement ಆಗುತ್ತಿದೆ?

ಅಧ್ಯಕ್ಷರು: ಆಮೇಲೆ ನೋಡೋಣ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ರಾಜ್ಯಪಾಲರ ಭಾಷಣದಲ್ಲಿ ನನಗೆ ಮಾತನಾಡಲು 3–4 ಗಂಟೆಗಳ ಕಾಲ ಅವಕಾಶ ಬೇಕಾಗುತ್ತದೆ.

ಅಧ್ಯಕ್ಷರು: ಒಂದು ಕೆಲಸ ಮಾಡೋಣ. ನಾಳೆ ಸಂಪೂರ್ಣವಾಗಿ ರಾಜ್ಯಪಾಲರ ಭಾಷಣದ ಮೇಲೆ ತೆಗೆದುಕೊಳ್ಳೋಣ

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಧ್ಯಾಹ್ನ 3–00 ಗಂಟೆಯಿಂದ ನನಗೆ ಅವಕಾಶ ಕೊಡುತ್ತೀರಾ?

ಅಧ್ಯಕ್ಷರು : ನಾನು ಹೇಗೆ ಹೇಳಲಿ. ನಾಳೆ ಬೆಳಗ್ಗೆ 10–30 ಗಂಟೆಯಿಂದ ಸಾಯಂಕಾಲ 5–00 ಗಂಟೆವರೆಗೆ ರಾಜ್ಯಪಾಲರ ಭಾಷಣದ ಮೇಲೆ complete ಆಗಿ ಮಾತನಾಡಿ,

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿ ಕೋರುತ್ತಿದ್ದೇನೆ. ನಾಳೆ ಬೆಳಗ್ಗೆ ನಮ್ಮ ಪಕ್ಷದ ಕಾರ್ಯಕ್ರಮ ಇದೆ.

ಅಧ್ಯಕ್ಷರು : ಪೂರೈಸಿಕೊಂಡು ಬನ್ನಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಅದನ್ನು ಮುಗಿಸಿಕೊಂಡು ಬರುತ್ತೇನೆ.

ಅಧ್ಯಕ್ಷರು: ಏಕೆಂದರೆ, ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನಿಮಗೆ ಅವಕಾಶ ಕೊಡಬೇಕಾಗಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಮಂತ್ರಿಯವರು ಈಗ ಉತ್ತರ ಕೊಟ್ಟರೆ ಉಪಯೋಗಕ್ಕೆ ಬರುವುದಿಲ್ಲ. ಎತ್ತಿನಹೊಳೆ ಯೋಜನೆಯಲ್ಲಿ ಏನೇನು ತೊಂದರೆ ಇದೆ ಎನ್ನುವ ಬಗ್ಗೆ ನಾನು ಹಲವಾರು ಮಾಹಿತಿ ಇಟ್ಟು ಕೊಂಡಿದ್ದೇನೆ. ಜನರಿಗೆ ನೀರು ಬೇಕು. ಅವರು ನಾಳೆ ಉತ್ತರ ಕೊಡಲಿ. ನಾನು ಈ ಪ್ರಶ್ನೆ ಕೇಳಿದ ಮೇಲೆ ನನ್ನ ಹತ್ತಿರವಿರುವ ಮಾಹಿತಿಯನ್ನು ಸದನದ ಮುಂದೆ ಇಟ್ಟಮೇಲೆ ಅವರು ಉತ್ತರ ಕೊಡಲಿ.

ಅಧ್ಯಕ್ಷರು: ಆಯಿತು. ಹಾಗೆಯೇ ಮಾಡೋಣ. ಕುಮಾರಸ್ವಾಮಿ ಯವರೇ, ತಾವು ಸಲಹೆ ಕೊಟ್ಟಿದ್ದೀರಿ, ಶಿವಲಿಂಗೇಗೌಡರು ಬಹಳ ವಿಸ್ತಾರವಾಗಿ ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಮನವರಿಕೆ ಮಾಡಿದ್ದಾರೆ. ಈ ಭಾಗದ ಶಾಸಕರನ್ನು ಮತ್ತು ಮಾನ್ಯ ಮುಖ್ಯಮಂತ್ರಿಯವರನ್ನು ಸೇರಿಸಿಕೊಂಡು ನೀವೂ ಸೇರಿ ಶಾಸಕರ ಒಂದು ಸಭೆಯನ್ನು ಕರೆದು ಚರ್ಚೆಮಾಡಿ ಸಾಧಕ ಬಾಧಕಗಳನ್ನು ನೋಡಿಕೊಂಡು ಒಂದು ತೀರ್ಮಾನಕ್ಕೆ ಏಕೆ ಬರಬಾರದು? ಶಿವಲಿಂಗೇಗೌಡರೆ, ಏನು ಹೇಳುತ್ತೀರಿ? ಏಕೆಂದರೆ, ಇಲ್ಲಿ ಏನೋ ಒಂದು ಹೇಳಿಬಿಡುತ್ತೇವೆ. ಸಾಧಕಬಾಧಕವನ್ನೂ ನೋಡಿಕೊಳ್ಳಬೇಕು. ಅದಕ್ಕೋಸ್ಕರ ಇದು ಪ್ರಮುಖವಾದ ವಿಷಯ.

ಶ್ರೀ ಎಂ.ಬಿ.ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಏನು ಸಲಹೆ ಕೊಟ್ಟಿದ್ದೀರಿ, ಆ ಪ್ರಕಾರ ಆ ಭಾಗದ ಎಲ್ಲಾ ಶಾಸಕರ, ಜನಪ್ರತಿನಿಧಿಗಳನ್ನು ಕರೆದು ಒಂದು ಸಭೆ ಮಾಡುವುದರ ಜೊತೆಗೆ ಮಾನ್ಯ ಕುಮಾರಸ್ವಾಮಿಯವರು ಹೇಳಿದ ಹಾಗೆ ನಾಳೆ ಅವರು ಮಾತನಾಡಿದ ಮೇಲೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಹಾಗೆಯೇ ಮಾಡೋಣ, ಉಪಯುಕ್ತವಾಗುತ್ತದೆ.

ಶ್ರೀ ಎಸ್.ಆರ್.ವಿಶ್ವನಾಥ್ : ಬೆಂಗಳೂರಿನ ಇಬ್ಬರು MLA ಗಳನ್ನು ಕರೆಯಬೇಕಾಗುತ್ತದೆ.

ಅಧ್ಯಕ್ಷರು: ಆಯಿತು, ಕರೆಯಿರಿ.

ಶ್ರೀ ಶಿವಾನಂದ.ಎಸ್.ಪಾಟೀಲ್: Calling Attention ತೆಗೆದುಕೊಳ್ಳಿ,

ಶ್ರೀ ಕೆ.ಎನ್.ರಾಜಣ್ಣ : ತಮ್ಮ ಕಛೇರಿಯಿಂದಲೇ ಈ ಅಜೆಂಡಾ ಪ್ರತಿ ಬಂದಿದೆ.

ಶ್ರೀ ಜಗದೀಶ್ ಶೆಟ್ಟರ್ (ಕುಳಿತುಕೊಂಡು) : ಸಿ.ಟಿ.ರವಿಯವರು ಅದರ ಬಗ್ಗೆ ಮಾತನಾಡುತ್ತಾರೆ.

ಅಧ್ಯಕ್ಷರು: ರವಿಯವರೆ, ಸಂಕ್ಷಿಪ್ತವಾಗಿ ಹೇಳಿ, ಒಂದೇ ಇದೆ. ಇದನ್ನು ಮೊದಲು ಪೂರೈಸಿಬಿಡೋಣ. ಆ ಮೇಲೆ Calling Attention ತೆಗೆದುಕೊಳ್ಳೋಣ. ಬೇಕಾದರೆ, ಇವತ್ತು ಹೆಚ್ಚು ಹೊತ್ತು ಕುಳಿತುಕೊಳ್ಳೋಣ.

ಶ್ರೀ ಕೆ.ಎನ್.ರಾಜಣ್ಣ : ಮಾನ್ಯ ಅಧ್ಯಕ್ಷರೆ, ಅಜೆಂಡಾವನ್ನು ತಮ್ಮ ಕಛೇರಿಯಿಂದ ಕಳುಹಿಸಿಕೊಟ್ಟಿದ್ದೀರಿ.

ಅಧ್ಯಕ್ಷರು : ಹೌದು.

ಶ್ರೀ ಕೆ.ಎನ್.ರಾಜಣ್ಣ :– ತಾವು ಎಲ್ಲಿದ್ದೀರಿ ಎಂದು ಗೊತ್ತಾಗುವುದಿಲ್ಲ. ಅಲ್ಲೊಂದು ಇಲ್ಲೊಂದು ತೆಗೆದುಕೊಂಡು ಕರೆದುಬಿಡುತ್ತೀರಿ. ಬಹಳ ಸಂತೋಷ, ಅದರಿಂದ ತೊಂದರೆ ಏನೂ ಇಲ್ಲ. ಆದರೆ, ಬೆಳಗ್ಗೆಯಿಂದಲೂ ನಮ್ಮ ವಿಷಯ ಈಗ ಬರಬಹುದು, ಆಗ ಬರಬಹುದು ಎಂದು ಕಾಯುತ್ತಿದ್ದೇವೆ. ನೋಡಿದರೆ ಅದು ಕಡೇ pageಗೆ ಹೋಗಿದೆ. ಒಂದು ಕಡೆಯಿಂದ ಚರ್ಚೆಗೆ ತೆಗೆದುಕೊಂಡರೆ ಎಲ್ಲರಿಗೂ ಒಳ್ಳೆಯದಾಗುತ್ತದೆ.

ಅಧ್ಯಕ್ಷರು:– ಅದಕ್ಕೇ ಬರುತ್ತೇನೆ. ಇದೊಂದನ್ನು ಪೂರೈಸಿಬಿಡುತ್ತೇನೆ.

ಶ್ರೀ.ಕೆ.ಎನ್.ರಾಜಣ್ಣ: Calling Attention ಇದೆ.

ಅಧ್ಯಕ್ಷರು : ಏನು ಮಾಡುವುದು ಹೇಳಿ,

ಶ್ರೀ ಕೆ.ಎನ್.ರಾಜಣ್ಣ : ಏನು ಮಾಡೋಣವೆಂದರೆ, ಹೋಗಲಿ, ಇದನ್ನೇ ಬೇಕಾದರೆ ಕಡೆಗೆ ಹಾಕಿ, ಬೇಡ ಎನ್ನುವುದಿಲ್ಲ. ನೀವು ಹೇಗೆ ಅಜೆಂಡಾ prepare ಮಾಡಿರುತ್ತೀರಿ ಆ ಪ್ರಕಾರ ಹೋಗುವುದು ಒಳ್ಳೆಯದಲ್ಲವೇ? ಎಲ್ಲೆಲ್ಲಿ ಬೇಕೋ ಯಾರಾರು ಬಂದು ಕೇಳುತ್ತಾರೋ ಅವರದ್ದು ತೆಗೆದುಕೊಂಡುಬಿಟ್ಟರೆ ನಮ್ಮ ಗತಿ ಏನಾಗಬೇಕು?

ಅಧ್ಯಕ್ಷರು: ಈ ಪ್ರಶ್ನೆಯ ಪ್ರಾಮುಖ್ಯತೆ ದೃಷ್ಟಿಯಿಂದ ಅದನ್ನು ಪ್ರಾರಂಭದಲ್ಲಿ ತೆಗೆದುಕೊಂಡಿದ್ದೇವೆ. ಇಲ್ಲದಿದ್ದರೆ ಗಮನಸೆಳೆಯುವ ಸೂಚನೆಯನ್ನೇ ತೆಗೆದುಕೊಳ್ಳಬೇಕಾಗಿತ್ತು.ಆದ್ದರಿಂದ , ನಿಯಮ 69ರಲ್ಲಿ ಒಟ್ಟು 3 ವಿಷಯಗಳಿವೆ. ಈಗ ಒಂದು ವಿಷಯ ಮುಗಿದಿದೆ. ರವಿಯವರೆ, ಅವಕಾಶ ಕೊಟ್ಟರೆ ಗಮನಸೆಳೆಯುವ ಸೂಚನೆಯನ್ನು ಪೂರೈಸಿಕೊಂಡು ನಿಮ್ಮ ವಿಷಯಕ್ಕೆ ಬರೋಣ.

(ಗೊಂದಲ)

ಶ್ರೀ ಕೆ.ಎನ್.ರಾಜಣ್ಣ: ಅಜೆಂಡಾ ಯಾವ ರೀತಿ ಇದೆ ಆ ಪ್ರಕಾರ ಕರೆಯಿರಿ. ಇದನ್ನು ನೀವೇ ತಯಾರು ಮಾಡಿಸಿರುವುದು. ಇಲ್ಲದಿದ್ದರೆ ಇದನ್ನು ಹರಿದುಹಾಕಿಬಿಡಿ,

(ಗೊಂದಲ)

ಅಧ್ಯಕ್ಷರು : ಒಂದ್ನಿಮಿಷ. Please.

ಶ್ರೀ ಸಿ.ಟಿ.ರವಿ : ಈಗ ಏನೆಂದರೆ ಇವೆಲ್ಲ ವಿಷಯಗಳಿಗಿಂತ ಹೆಚ್ಚು ಜಟಿಲವಾದ ವಿಷಯ ಎಂದು ನಿಮಗೆ ಗೊತ್ತಿದೆ.

(ಗೊಂದಲ)

ಶ್ರೀ ಕೆ.ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೆ, ಅಜೆಂಡಾ ಪ್ರಕಾರ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ರಾಜಣ್ಣ, ಸ್ವಲ್ಪ ಕೇಳಿ. ಒಂದು ಕೆಲಸ ಮಾಡೋಣ. ರವಿಯವರೆ, ಅದು ದೊಡ್ಡ ಪ್ರಶ್ನೆ ಇದೆ ಮತ್ತು legal ಪ್ರಶ್ನೆ ಇದೆ. ಗಡಿಬಿಡಿಯಲ್ಲಿ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಈ ವಿಷಯವನ್ನು ನಾಳೆಯ ಅಜೆಂಡಾದಲ್ಲಿ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಸ್.ಆರ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಅರ್ಕಾವತಿ ವಿಷಯಕ್ಕೆ ಸಂಬಂಧಿಸಿದಂತೆ 5 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು : ಆಯಿತು. 5 ನಿಮಿಷಗಳಲ್ಲಿಯೇ ಮಾತನಾಡಿ ಮುಗಿಸಿ,

ಶ್ರೀ ಎಸ್.ಆರ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, 69ರ ನಿಯಮದಡಿಯಲ್ಲಿ ಅರ್ಕಾವತಿ ನದಿಗೆ ಸಂಬಂಧಪಟ್ಟ ಹಾಗೆ..

ಶ್ರೀ ಕೆ.ಎನ್.ರಾಜಣ್ಣ : ಸರ್, ತಾವು ಅವರಿಗೆ ಮಾತನಾಡಲು ಕರೆದಿದ್ದೀರಾ?

(ಗೊಂದಲ)

ಅಧ್ಯಕ್ಷರು : ಸ್ವಲ್ಪ ತಾಳಿ, please.

ಶ್ರೀ ಕೆ.ಎನ್.ರಾಜಣ್ಣ: ಹೋಗಲಿ, ಕಾರ್ಯಸೂಚಿಯನ್ನು ತೆಗೆದು ಹಾಕಿಬಿಡಿ. ನಿಮಗೆ ಇಷ್ಟಬಂದ ಹಾಗೆ ಯಾವುದು ಬೇಕೋ ಅದನ್ನು ತೆಗೆದುಕೊಳ್ಳಿ,

ಅಧ್ಯಕ್ಷರು: ಏನು?

ಶ್ರೀ ಕೆ.ಎನ್.ರಾಜಣ್ಣ: ಕಾರ್ಯಸೂಚಿ ಏನು ತಯಾರು ಮಾಡಿ ತಾವು ಕಳುಹಿಸಿದ್ದೀರಿ.....

(ಗೊಂದಲ)

ಅಧ್ಯಕ್ಷರು: ರಾಜಣ್ಣ, Do not question my authority . Please listen to me, ಸನ್ನಿವೇಶಕ್ಕೆ ತಕ್ಕಂತೆ ಕೆಲವೊಂದು ಬದಲಾವಣೆ ಮಾಡಿದ್ದೇನೆ. How can _ you question it ? ಬರುತ್ತೇನೆ ತಾಳಿ, ದಯವಿಟ್ಟು.

ಶ್ರೀ ಕೆ.ಎನ್.ರಾಜಣ್ಣ:– ತಮ್ಮ ತೀರ್ಮಾನ, ತಮ್ಮ ಅಧಿಕಾರವನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ನಿಮ್ಮ ಕಛೇರಿಯಿಂದ ಬಂದಿರತಕ್ಕಂಥ Agenda, ಕಾರ್ಯಸೂಚಿ ಕೊಟ್ಟಿದ್ದೀರಿ. ಆ ಕಾರ್ಯಸೂಚಿ ಪ್ರಕಾರ ನಡೆಸಿ ಎಂದು ಮನವಿ ಮಾಡಿಕೊಳ್ಳುತ್ತಿದ್ದೇವಷ್ಟೆ.

(ಗೊಂದಲ)

ಅಧ್ಯಕ್ಷರು : ಆಯಿತು, ನಿಮ್ಮ ಕಾಲಿಗೆ ಬಿದ್ದು ನಮಸ್ಕಾರ ಮಾಡಿ ಕ್ಷಮಿಸಬೇಕೆಂದು ಕೇಳುತ್ತೇನೆ, ಕುಳಿತುಕೊಳ್ಳಿ,

ಶ್ರೀ ಕೆ.ಎನ್.ರಾಜಣ್ಣ:– ಹೀಗೆ ಮಧ್ಯೆ ಮಧ್ಯೆ ಒಂದೊಂದು ತೆಗೆದು ಕೊಂಡುಬಿಟ್ಟರೆ ಹೇಗೆ? ನಾವು ಏಕೆ ಕಾಯಬೇಕು?

ಅಧ್ಯಕ್ಷರು: ಸ್ವಲ್ಪ ಸನ್ನಿವೇಶವನ್ನು ಅರ್ಥಮಾಡಿಕೊಳ್ಳಬೇಕು.

2. ವಿಷಯ ಅರ್ಕಾವತಿ ನದಿ ಮತ್ತು ಕುಮುದ್ವತಿ ನದಿಗಳ 1 ಕಿಮೀ ವ್ಯಾಪ್ತಿಯಲ್ಲಿ ಯಾವುದೇ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಬಳಕೆ ಮಾಡದಿರುವ ಬಗ್ಗೆ ಹೊರಡಿಸಿರುವ ಸರ್ಕಾರಿ ಆದೇಶಕ್ಕೆ ತಿದ್ದುಪಡಿ ತರುವ ಕುರಿತು.